# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮಾರ್ಚ್ 15, 2022

ಸಂಪುಟ : 48 ಸಂಚಿಕೆ : 304 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com



BSC®
B.S. CHANNABASAPPA & SONS
ಸ್ಥಾಪನೆ - 1938
Shop Online @ www.bscfashion.com

ಮದುವೆ ಜವಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ #ಬಟ್ಟೆಅಂದರೆ BSC

ಬಿ.ಎಸ್.ಚನ್ನಬಸಪ್ಪ & ಸನ್ಸ್
ದಾವಣಗೆರೆ
88804 33000


## ಆರೋಗ್ಯ ಇಲಾಖೆಯ ಮೃತ್ಯುಂಜಯ ನಿಧನ



ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆ (ಬೆಂಗಳೂರು) ಯ

**ಶ್ರೀ ಬಿ. ಮೃತ್ಯುಂಜಯ**

ಅವರು ದಿನಾಂಕ 14.03.2022ರ ಸೋಮವಾರ ಸಂಜೆ 6.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತ್ಯುಂಜಯ ಅವರು ದಿ. ಡಾ. ಭೀಮಪ್ಪ ಆಲೂರು ಅವರ ಪುತ್ರ. ಮೃತರಿಗೆ ಸುಮಾರು 60 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು 15.03.2022ರ ಮಂಗಳವಾರ ಬೆಳಿಗ್ಗೆ 11ರವರೆಗೆ ರೈತರ ಬೀದಿಯಲ್ಲಿರುವ ಮೃತರ ಸ್ವಗೃಹದಲ್ಲಿಡಲಾಗುವುದು. ನಂತರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆಯ ಸಾರ್ವಜನಿಕ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಬಿ. ವಸಂತ ಕುಮಾರ್ ಹಾಗೂ ಸಹೋದರರು ಮತ್ತು ಕುಟುಂಬ ವರ್ಗದವರು ಮತ್ತು ಬುಳ್ಳಾವರ ವಂಶಸ್ಥರು.**
**ಮೊ. 99725-61396**

## ಭಾವಪೂರ್ಣ ಶ್ರದ್ಧಾಂಜಲಿ



ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆಯ (ಬೆಂಗಳೂರು)

**ಶ್ರೀ ಬಿ. ಮೃತ್ಯುಂಜಯ**

ಅವರು ದಿನಾಂಕ 14.03.2022ರಂದು ನಿಧನರಾಗಿರುವುದು ನಮಗೆ ಅತೀವ ದುಃಖವಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಜೋಗಪ್ಪರ ಕುಟುಂಬ ವರ್ಗ**
**ರಾಜ್ ಭವನ್ ಹೋಟೆಲ್, ಪಿ.ಬಿ. ರಸ್ತೆ, ದಾವಣಗೆರೆ.**

|| ಶ್ರೀ ಜಂಬುನಾಥ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ



ಜನನ: 20.11.1955 ನಿಧನ: 04.03.2022

ದಾವಣಗೆರೆ ಜಿಲ್ಲೆ ಜಗಳೂರು ತಾ, ಮುಗ್ಗಿದರಾಗಿಹಳ್ಳಿ ಗ್ರಾಮದ ವಾಸಿ
**ಶ್ರೀಮತಿ ಜಾನಮ್ಮ ದಿ|| ಶ್ರೀ ಹುಲ್ಲುಮನೆ ಅಜ್ಜಪ್ಪ**
**ಶ್ರೀ ಹೆಚ್.ಎ. ಚಂದ್ರಪ್ಪ ಮತ್ತು ಸಹೋದರರು**
ಮಾಡುವ ವಿಜ್ಞಾಪನೆಗಳು.
ದಿನಾಂಕ 04.03.2022ನೇ ಶುಕ್ರವಾರ ರಾತ್ರಿ 10.51 ಗಂಟೆಗೆ
**ದಿ|| ಶ್ರೀ ಹೆಚ್.ಎ. ಕೆಂಚನಗೌಡ ಇವರ ಧರ್ಮಪತ್ನಿ**
**ಶ್ರೀಮತಿ ಯು.ಎನ್. ಸುಲೋಚನಮ್ಮ**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 15.03.2022ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ ಡಾ|| ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠ, ಶಿವಾಚಾರ್ಯ ನಿಕೇತನ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು:**

ಮೃತರ ಮಕ್ಕಳಾದ : **ಶ್ರೀಮತಿ ಶೋಭ ಶ್ರೀ ಕೆ. ನಾಗರಾಜ್,** ಇಂಗ್ಲೆಂಡ್
**ಶ್ರೀಮತಿ ಚೇತನ ಶ್ರೀ ಕೆ. ರಮೇಶ್,** ಅಬುದಾಬಿ
ಶ್ರೀ ಹೆಚ್.ಎ. ಚಂದ್ರಪ್ಪ ಮತ್ತು ಶ್ರೀ ಹೆಚ್.ಎ. ರಾಜಪ್ಪ ಮತ್ತು ಸಹೋದರಿಯರು ಹಾಗೂ ಮಕ್ಕಳು,
ದಿ|| ಶ್ರೀಮತಿ ಪಾರ್ವತಮ್ಮ ದಿ|| ಯು. ನಾಗಪ್ಪನವರ ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು, ಅಸಗೋಡು
ಶ್ರೀಮತಿ ಎನ್. ಯಶೋಧಮ್ಮ ಶ್ರೀ ಎಂ.ಆರ್. ರಾಜಶೇಖರಪ್ಪ ಮತ್ತು ಮಕ್ಕಳು, ಆನಕೊಂಡ
ಹುಲ್ಲುಮನೆ ವಂಶಸ್ಥರು ಹಾಗು ಬಂಧು-ಮಿತ್ರರು. ಮೊ: 97432 72198




**ಸರ್ವರಿಗೂ ನಗರದೇವತೆ ಶ್ರೀ ದುರ್ಗಾಂಬಿಕಾದೇವಿ ಜಾತ್ರಾ ಮಹೋತ್ಸವದ ಶುಭಾಶಯಗಳು**

ಜಗತ್‌ರಕ್ಷಕಿ, ಜಗತ್‌ಜನನಿ, ನಗರದೇವತೆ, ಶಕ್ತಿದೇವತೆ ಶ್ರೀ ದುರ್ಗಾಂಬಿಕಾದೇವಿಯು ಸರ್ವರಿಗೂ ಆಯುರಾರೋಗ್ಯ, ಐಶ್ವರ್ಯ ಸುಖ ಶಾಂತಿ ನೆಮ್ಮದಿ ನೀಡಲಿ, ಸಕಲರಿಗೂ ಸನ್ಮಂಗಳವನ್ನುಂಟುಮಾಡಲೆಂದು ಆಶಿಸುತ್ತಾ ಶ್ರೀ ದುರ್ಗಾಂಬಿಕಾದೇವಿಯ ಜಾತ್ರಾ ಮಹೋತ್ಸವದ ಶುಭಾಶಯಗಳನ್ನು ಕೋರುತ್ತೇನೆ





**ಭರತ್ ಎಸ್. ಚನ್ನಗಿರಿ**
ಪ್ರಧಾನ ಕಾರ್ಯದರ್ಶಿ,
ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್ (ರಿ.) ದಾವಣಗೆರೆ.


## ಶ್ರೀಮತಿ ಸವಿತ ವಿಠ್ಠಲ್ ಸಾ ಮೆಹರ್ವಾಡೆ ನಿಧನ



ಹರಿಹರ ನಗರದ ಹಂಸಾಗರ ಕಾಂಪೌಂಡ್ ನಿವಾಸಿ
**ಕೈಗಾರಿಕೋದ್ಯಮಿಗಳು, ಸಂಕೇತ ಎಂಟರ್‌ಪ್ರೈಸಸ್ ಮಾಲೀಕರಾದ ವಿಠ್ಠಲ್ ಸಾ ಮೆಹರ್ವಾಡೆ ಇವರ ಧರ್ಮಪತ್ನಿ**
**ಶ್ರೀಮತಿ ಸವಿತ ವಿಠ್ಠಲ್ ಸಾ ಮೆಹರ್ವಾಡೆ**

ಅವರು ದಿನಾಂಕ 14.03.2022ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 45 ವರ್ಷ ವಯಸ್ಸಾಗಿತ್ತು. ಪತಿ ವಿಠ್ಠಲ್ ಸಾ ಮೆಹರ್ವಾಡೆ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.03.2022ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಹರಿಹರದ ವಿಶ್ರಾಮ್ ದಾಲ್ಮಿಯ ಘಾಟ್‌ನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ ಹಾಗೂ ಕೈಗಾರಿಕೋದ್ಯಮಿಗಳು, ಮಾಲೀಕರು ಹಾಗೂ ಸಿಬ್ಬಂದಿಗಳು**

## 31ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ನಲ್ಲೂರು ಗೌರಮ್ಮ ನರಹರಿಶೇಟ್ ರೇವಣಕರ್**

ಜನನ : 11.11.1917 ನಿಧನ : 25.2.1991

ನೀವು ನಮ್ಮನ್ನಗಲಿ 31 ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ

ನಲ್ಲೂರು ಬಿ.ಎನ್ ಸರ್ವೋತ್ತಮ್ ರಾವ್ ಮತ್ತು ಸಹೋದರರು, ಸಹೋದರಿಯರು, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಬಂಧು-ಮಿತ್ರರು.


**ಸರ್ವರಿಗೂ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಯ ಹಾರ್ದಿಕ ಶುಭಾಶಯಗಳು**
ದೇವಿಯು ಸರ್ವರಿಗೂ ಸನ್ಮಂಗಳವನ್ನುಂಟು ಮಾಡಲಿ ಎಂದು ಹಾರೈಸುತ್ತೇವೆ

ದಾವಣಗೆರೆ ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವಕ್ಕೆ



ಆಗಮಿಸುತ್ತಿರುವ ಸದ್ಭಕ್ತರಿಗೆ ಹಾರ್ದಿಕ ಸುಸ್ವಾಗತ

BAPUJI EDUCATIONAL ASSOCIATION (R) DAVANGERE ESTD. 1958

**ಬಾಪೂಜಿ ವಿದ್ಯಾಸಂಸ್ಥೆ**
2ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577 002
ದೂರವಾಣಿ: (08192) 251302, 250659, ಇಮೇಲ್: bea_dvg@hotmail.com


**ಆಡಳಿತ ಮಂಡಳಿ**



ಡಾ. ಶಾಮನೂರು ಶಿವಶಂಕರಪ್ಪ
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ಶಾಸಕರು, ದಾವಣಗೆರೆ ದಕ್ಷಿಣ




ಆರ್. ರಮಾನಂದ್
ಅಧ್ಯಕ್ಷರು




ಕೆ.ಎ. ಗಿರಿಜಮ್ಮ
ಉಪಾಧ್ಯಕ್ಷರು



ಎ.ಎಸ್. ನಿರಂಜನ್
ಖಜಾಂಚಿ




ಎ.ಎಸ್. ವೀರಣ್ಣ
ಸದಸ್ಯರು



ಎಸ್.ಎಸ್. ಜಯಣ್ಣ
ಸದಸ್ಯರು



ಪ್ರಭಾ ಮಲ್ಲಿಕಾರ್ಜುನ್
ಸದಸ್ಯರು



ಆರ್.ಎಲ್. ಭೀಮಾನಂದ್
ಸದಸ್ಯರು



ಸಂಪನ್ನ ಮುತಾಲಿಕ್
ಸದಸ್ಯರು



ಎಸ್.ಎಸ್. ಮಲ್ಲಿಕಾರ್ಜುನ್
ಗೌರವ ಜಂಟಿ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ

# ಯುವ ಸಮೂಹದಲ್ಲಿ ಕನ್ನಡ ಸಾಹಿತ್ಯ ಪುಸ್ತಕಗಳ ಓದುವಿಕೆ ಕ್ಷೀಣ

**ಜಗಳೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಡಾ.ದಾದಾಪೀರ್ ನವಿಲೇಹಾಳ್ ವ್ಯಾಕುಲತೆ**



ಜಗಳೂರು, ಮಾ.14- ವಿದ್ಯಾರ್ಥಿ ಯುವ ಸಮೂಹದಲ್ಲಿ ಕನ್ನಡ ಸಾಹಿತ್ಯಾಸಕ್ತಿ, ಪುಸ್ತಕಗಳ ಓದುವಿಕೆ ಕ್ಷೀಣಿಸುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದು ಪ್ರಾಧ್ಯಾಪಕ ಡಾ.ದಾದಾಪೀರ್ ನವಿಲೇಹಾಳ್ ತಿಳಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿ ಯಿಂದ ಹಮ್ಮಿಕೊಂಡಿದ್ದ ನೂತನ ಕಾರ್ಯ ಕಾರಿ ಸಮಿತಿ ಪದಗ್ರಹಣ ಹಾಗೂ ಸಾಹಿತ್ಯ ಚಟು ವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಸಾಹಿತ್ಯ ಪರಿಷತ್ತು ಕನ್ನಡ ಭಾಷೆ ಮತ್ತು ಕನ್ನಡ ಸಾಹಿತ್ಯ ಚಟುವಟಿಕೆಗಳನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಆಯೋಜಿಸಿದರೆ ಮಾತ್ರ ಸ್ಥಳೀಯ ಸಂಸ್ಕೃತಿ, ಕ್ರೀಡೆ, ವಾಸ್ತುಶಿಲ್ಪದ ಪರಿಕಲ್ಪನೆ ಸಮಾಜಕ್ಕೆ ಸಿಗುವುದು ಎಂದರು.

ಕನ್ನಡ ಸಾಹಿತ್ಯ ಪರಿಷತ್ ಸ್ಥಳೀಯ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯನ್ನಾಗಿಸಬೇಕಿದೆ. ಜೀವನದಲ್ಲಿ ಶಿಕ್ಷಣದ ಜೊತೆಗೆ ಸಂಸ್ಕಾರದ ಮೌಲ್ಯಗಳನ್ನು ಮೈಗೂಡಿಸಿ ಕೊಳ್ಳಬೇಕು. ಶಬ್ದಗಳ ಅರ್ಥಗಳನ್ನು ಅರಿತು ಭಾಷೆ ಕಲಿಯಬೇಕು.

ಪೋಷಕರು ಸಿನಿಮಾ ಧಾರಾವಾಹಿಗಳ ವ್ಯಾಮೋಹ ತೊರೆಯಬೇಕು. ಮಕ್ಕಳ ಭವಿಷ್ಯ ರೂಪಿಸಲು ಮುಂದಾಗ ಬೇಕು ಹಾಗೂ ಕನ್ನಡ ಚರಿತ್ರೆಯನ್ನು ತಿಳಿಸಬೇಕು. ವಿದ್ಯಾರ್ಥಿಗಳು ಮೊಬೈಲ್‌ನಲ್ಲಿ ಸಿನಿಮಾ ಹಾಡುಗಳನ್ನು ವೀಕ್ಷಿಸಿ ಕಾಲಹರಣ ಮಾಡುವುದನ್ನು ತೊರೆದು ಸ್ಪರ್ಧಾತ್ಮಕ ಪರೀಕ್ಷೆಗೆ ಪೂರಕವಾಗುವ ಸಾಮಾನ್ಯ ಜ್ಞಾನದ ಪ್ರಶ್ನೆಗಳನ್ನು ಡೌನ್ ಲೋಡ್ ಮಾಡಿ ಜ್ಞಾನ ಸಂಪಾದನೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಕನ್ನಡ ನಾಡಿನಲ್ಲಿ ಭಿನ್ನಮತಗಳಿದ್ದರೂ ಕನ್ನಡ ಜಾತಿಯಾಗಬೇಕು, ಸಂವಿಧಾನ ಧರ್ಮವಾಗ ಬೇಕಿದೆ. ಎಂದರು.

ಸಾಹಿತಿ ಎನ್ ಟಿ ಯರ್ರಿಸ್ವಾಮಿ ಮಾತನಾಡಿ, ಜಗಳೂರಿನಲ್ಲಿ ಕವಿ ಮಹಲಿಂಗರಂಗ, ಮುತ್ಸದ್ಧಿ ರಾಜಕಾರಣಿ ಹಾಗೂ ಸಾಹಿತಿ ಜೆಎಂ ಇಮಾಂ ಸಾಹೇಬರು ಕನ್ನಡಕ್ಕೆ ಕೊಡುಗೆ ನೀಡಿದ್ದು. ಕನ್ನಡ ಭಾಷೆಯ ಆಸಕ್ತಿ ಸೊರಗಬಾರದು. ಕನ್ನಡದ ಸಂಭ್ರಮ ಮನೆಮಾಡಬೇಕಿದೆ ಎಂದು ತಿಳಿಸಿದರು.

ಮಹಾಲಿಂಗ ರಂಗನ ಸಮಾಧಿ ಸ್ಥಳ ಕೊಣ ಚಗಲ್ ಗುಡ್ಡವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿಸಲು ಕನ್ನಡಪರ ಸಂಘಟನೆಗಳು ಬೆಂಬಲಿಸಬೇಕು ಎಂದು ಕರೆ ನೀಡಿದರು.

ಕೊಶಾಧ್ಯಕ್ಷ ರಾಘವೇಂದ್ರ ನಾಯರಿ ಮಾತನಾಡಿ, 11ನೇ ಜಿಲ್ಲಾ ಸಾಹಿತ್ಯ ಪರಿಷತ್ತಿನ ಸಮ್ಮೇಳನವನ್ನು ಮಾರ್ಚ್ 26 ಮತ್ತು 27 ರಂದು ದಾವಣಗೆರೆ ಸಮೀಪದ ಎಲೆಬೇತೂರಿ ನಲ್ಲಿ ಆಯೋಜಿಸಲು ಬೃಹತ್ ವೇದಿಕೆಯ ನಿರ್ಮಾಣಕ್ಕೆ ಭರದ ಸಿದ್ದತೆ ನಡೆಯುತ್ತಿದೆ. ಸಮ್ಮೇಳನದಲ್ಲಿ ಸಿರಿಗೆರೆ ಶ್ರೀಗಳು ಮತ್ತು ಕಲಾವಿದರು ಭಾಗವಹಿಸಲಿದ್ದಾರೆ. ಜಗಳೂರು ಸಾಹಿತ್ಯ ಪರಿಷತ್ತಿನ ಕಾರ್ಯಚಟು ವಟಿಕೆಗಳ ಪಟ್ಟಿ ತಯಾರಿಸಿರುವುದು ರಾಜ್ಯಕ್ಕೆ ಮಾದರಿಯಾಗುವಂತಿದೆ. ಎಂದು ಸಂತಸ ವ್ಯಕ್ತಪಡಿ ಸಿದರು.

ಹಿಂದುಳಿದ ತಾಲ್ಲೂಕಿನ ಹಣೆಪಟ್ಟಿ ಇರಬಹುದು. ಆದರೆ ಸಾಹಿತ್ಯಿಕವಾಗಿ ಸಂಪದ್ಭರಿತವಾಗಿದೆ. ಕನ್ನಡ ಸಾಹಿತ್ಯದ ಚಟುವಟಿಕೆಗಳು ಯಶಸ್ವಿಯಾಗಿ ನಡೆಯಲಿ ಎಂದು ಹೇಳಿದರು.

ಕಸಾಪ ಜಿಲ್ಲಾಧ್ಯಕ್ಷ ವಾಮದೇವಪ್ಪ, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ತಾಲ್ಲೂಕಿನಲ್ಲಿ ಹೊಸ ಸಮಿತಿ ಎಲ್ಲ ಸಾಹಿತ್ಯ ಆಸಕ್ತರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಸಾಹಿತ್ಯದ ಚಟುವಟಿಕೆಗಳನ್ನು ಯಶಸ್ವಿ ಯಾಗಿ ನಡೆಸಿ ಕೊಂಡು ಹೋಗಬೇಕು ಎಂದು ತಿಳಿಸಿದರು.

ತಾಲೂಕು ಅಧ್ಯಕ್ಷೆ ಸುಜಾತ, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷೆ ಗೀತಾಮಂಜು, ಕಸಾಪ ಮಾಜಿ ಅಧ್ಯಕ್ಷ ಹಜರತ್ ಅಲಿ, ಸಾಹಿತಿ ಡಿ.ಸಿ.ಮಲ್ಲಿಕಾರ್ಜುನ್, ನೌಕರರ ಸಂಘದ ಅಧ್ಯಕ್ಷ ಅಜ್ಜಪ್ಪ ನಾಡಿಗರ್, ಫಾದರ್ ವಿಲಿಯಂ ಮಿರಾಂದ, ಜಿ.ಪಂ ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ,ಸಾಹಿತಿ ಬಸ ವೇಶ್, ಪಿ.ಎಸ್.ಅರವಿಂದನ್, ಗೌರಮ್ಮ ಸೇರಿದಂತೆ ಇತರರು ಭಾಗವಹಿಸಿದ್ದರು.

## ಹೊನ್ನಮ್ಮ ದೇವಿ ಜಾತ್ರೆ ರದ್ದು




ರಾಣೇಬೆನ್ನೂರ, ಮಾ.14- ಸುಕ್ಷೇತ್ರವೆಂದೇ ನಾಡಿನುದ್ದಕ್ಕೂ ಹೆಸರಾದ ತಾಲ್ಲೂಕಿನ ಗುಡಿಹೊನ್ನತ್ತಿಯ ಶ್ರೀ ಹೊನ್ನಮ್ಮ ದೇವಿಯ ವಾರ್ಷಿಕ ಜಾತ್ರಾ ಮಹೋ ತ್ಸವವನ್ನು ಕೋವಿಡ್ ಸಾಂಕ್ರಾಮಿಕದ ಕಾರಣ ಸರ್ಕಾರದ ನಿಯಮಾವಳಿ ಜಾರಿ ಯನ್ವಯ ಹಾಗೂ ಭಕ್ತರ ಹಿತ ದೃಷ್ಟಿಯಿಂದ ದೇವಸ್ಥಾನ ಸಮಿತಿಯ ಆಡಳಿತಾಧಿಕಾರಿಗಳು ಹಾಗೂ ತಾಲ್ಲೂಕು ದಂಡಾಧಿಕಾರಿಗಳು ಈ ವರ್ಷದ ಜಾತ್ರೆಯನ್ನು ರದ್ದುಪಡಿಸಿ ಆದೇಶಿಸಿದ್ದಾರೆ.

ಇದೇ ಮಾ. 18 ರಿಂದ 20 ರವರೆಗೆ 3 ದಿನಗಳ ಕಾಲ ನಡೆಯಬೇಕಾಗಿದ್ದ ಈ ಜಾತ್ರೆಯನ್ನು ಜಿಲ್ಲಾ ದಂಡಾಧಿಕಾರಿಗಳ ವಿಪತ್ತು ನಿರ್ವಹಣಾ ಕಾಯ್ದೆ ಅನ್ವಯ ರದ್ದು ಪಡಿಸಿದ್ದು, ಭಕ್ತರು ಹಾಗೂ ಸಾರ್ವಜನಿಕರು ಜಾತ್ರೆಯಲ್ಲಿ ಪಾಲ್ಗೊಳ್ಳುವು ದನ್ನು ನಿಷೇಧಿಸಲಾಗಿದೆ ಎಂದು ದೇವಸ್ಥಾನ ಸಮಿತಿಯ ಆಡಳಿತಾ ಧಿಕಾರಿಗಳು ಮತ್ತು ತಹಶೀಲ್ದಾರ್ ತಿಳಿಸಿದ್ದಾರೆ.

## 12-14ರ ಮಕ್ಕಳಿಗೆ ಕೊರೊನಾ ಲಸಿಕೆ

ನವದೆಹಲಿ, ಮಾ. 14 – 12-14 ವರ್ಷದ ಮಕ್ಕಳಿಗೆ ಕೊರೊನಾ ಲಸಿಕೆ ಪ್ರಕ್ರಿಯೆ ನಾಳೆ ಬುಧವಾರದಿಂದ ಆರಂಭವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ತಿಳಿಸಿದ್ದಾರೆ.

ಬಯಾಲಜಿಕಲ್ ಇ ಕಂಪನಿ ಉತ್ಪಾದಿಸಿರುವ ಕೊರ್ಬಿವ್ಯಾಕ್ಸ್ ಲಸಿಕೆಯನ್ನು 12-14 ವರ್ಷದ ಮಕ್ಕಳಿಗೆ ನೀಡಲಾಗುವುದು. ಈ ವಿಷಯ ತಿಳಿಸಿರುವ ಸಚಿವ ಮಾಂಡವೀಯ, ಇನ್ನು ಮುಂದೆ 60 ವರ್ಷ ಮೀರಿದ ಎಲ್ಲರೂ ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆಯಬಹುದು ಎಂದು ಹೇಳಿದ್ದಾರೆ. 2008ರಿಂದ 2010ರ ನಡುವೆ ಜನಿಸಿದವರು ಈ ಲಸಿಕೆ ಪಡೆಯಬಹುದು. ಈ ವಯೋಮಾನದಲ್ಲಿ 7.11 ಕೋಟಿ ಮಕ್ಕಳು ಬರುತ್ತಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

## ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ



ಹೊನ್ನಾಳಿ, ಮಾ.14- ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ ಇಂದು ಬೆಳಗಿನ ಜಾವ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ನಡೆಯುವ ವೇಳೆ ಗಡ್ಲವ್ವರ ತಿಪ್ಪೇಶ್ ಸಂಗಡಿಗರು ಪುರವಂತಿಕೆ ಒಡಪುಗಳನ್ನು ಹೇಳಿ ದರು. ಒಣ ಕೊಬ್ಬರಿಯನ್ನು ಸುಡುತ್ತಾ ಭಕ್ತರು ರಥಕ್ಕೆ ಮಂಡಕ್ಕಿ, ಮೆಣಸಿನಕಾಳನ್ನು ಎಸೆದು ರಥವನ್ನು ಎಳೆಯುತ್ತಾ ತಮ್ಮ ಭಕ್ತಿ ಸಮರ್ಪಿಸಿದರು.

**ಯಕ್ಕನಹಳ್ಳಿ**

ಗ್ರಾಮ ಪಂಚಾಯ್ತಿ ಅಧ್ಯಕ್ಷ ವೈ.ಕೆ.ದಯಾನಂದ, ಸದಸ್ಯ ಸಳ್ಳಜ್ಜರ ಎಸ್. ಎಲ್.ಜಯಪ್ಪ, ಶ್ರೀ ಬಸವೇ ಶ್ವರ ಸ್ವಾಮಿ ಸಮಿತಿ ಅಧ್ಯಕ್ಷ ಎಸ್.ಎಂ.ನಾಗರಾಜಪ್ಪ, ಶ್ರೀ ಬಸವೇಶ್ವರ ರೈಸ್‌ಮಿಲ್ ಮಾಲೀಕ ರಾದ ಟಿ.ಎಸ್.ಬಸವರಾಜಪ್ಪ, ಟಿ.ಎಸ್. ಜಗದೀಶ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ತಟ್ಟೇರ ನಾಗರಾಜಪ್ಪ, ತಟ್ಟೇರ ಕರಿಬಸಪ್ಪ, ಡೈರಿ ಬಸವ ರಾಜಪ್ಪ, ಪೋಸ್ಟ್ ಹನು ಮಂತಪ್ಪ, ಚನ್ನಜ್ಜರ ಕುಬೇಂದ್ರಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಗದ್ದೇರ ಮಹಾ ದೇವಪ್ಪ, ಕುಂದೂರು ಮಹೇ ಶ್ವರಪ್ಪ, ಚನ್ನಜ್ಜರ ಹಾಲೇಶಪ್ಪ, ಹಾದಿಮನೆ ರಾಜಣ್ಣ ಮುರುಗೇಂ ದ್ರಪ್ಪ, ಗೌಡ್ರ ಚನ್ನಬಸಪ್ಪ, ಮಗ್ದದರ ನಾಗಪ್ಪ, ಶ್ರೀ ಮಾಯಾಂಬಿಕ ಸಮಿತಿ ಅಧ್ಯಕ್ಷ ಶಂಭುಲಿಂಗಪ್ಪ, ಉದ್ದಜ್ಜರ ನಾಗರಾಜ ಮತ್ತು ಇತರರು ಸಹಕರಿಸಿದರು.

## ಪಶು ವೈದ್ಯಾಧಿಕಾರಿ ಮೇಲೆ ಹಲ್ಲೆ ಕಾನೂನು ಕ್ರಮಕ್ಕೆ ಆಗ್ರಹ

ದಾವಣಗೆರೆ, ಮಾ. 14- ದೇವರ ಬೆಳಕೆರೆ ಪಶು ವೈದ್ಯಾಧಿಕಾರಿ ಮೇಲೆ ಹಲ್ಲೆ ನಡೆಸಿದವರನ್ನು ಕೂಡಲೇ ಬಂಧಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಾಲಾಕ್ಷಿ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದ್ದಾರೆ.

ಪಶು ವೈದ್ಯಾಧಿಕಾರಿ ಡಾ.ಯಲ್ಲಪ್ಪ ಮಾತನಾಡಿ, ಕೊಟ್ಟಿಗೆ ಸಾಲಕ್ಕೆ ಪ್ರಮಾಣ ಪತ್ರವೊಂದನ್ನು ನೀಡುವ ವಿಚಾರದಲ್ಲಿ ಆಧಾರ್ ಕಾರ್ಡ್ ಕೇಳಿದ್ದಕ್ಕೆ ಕೋಪಗೊಂಡು ದೇವರಬೆಳಕೆರೆ ಗ್ರಾಮದ ಕೆ.ಗಿರಿಯಪ್ಪ ಅವರು, ನಾನು ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ನನಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿ ಹಲ್ಲೆ ಮಾಡಿದ್ದಾರೆ ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಗುರುಮೂರ್ತಿ, ಖಜಾಂಚಿ ಎಸ್.ಕಲ್ಲೇಶಪ್ಪ, ಪಶು ವೈದ್ಯಾಧಿಕಾರಿಗಳ ಸಂಘದ ಗೌರವ ಅಧ್ಯಕ್ಷ ಚಂದ್ರಶೇಖರ ಸುಂಕದ ಪತ್ರಿಕಾಗೋಷ್ಠಿಯಲ್ಲಿದ್ದರು.

## ರಫ್ತು ಶೇ.25.1ರಷ್ಟು ಹೆಚ್ಚಳ

ನವದೆಹಲಿ, ಮಾ. 14 – ಕಳೆದ ಫೆಬ್ರವರಿಯಲ್ಲಿ ದೇಶದ ರಫ್ತು ಶೇ.25.1ರಷ್ಟು ಹೆಚ್ಚಾಗಿ 34.57 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಇಂಜಿನಿಯರಿಂಗ್, ಪೆಟ್ರೋ ಲಿಯಂ ಹಾಗೂ ರಾಸಾಯನಿಕ ವಸ್ತುಗಳ ರಫ್ತು ಏರಿಕೆಯಾಗಿದೆ. ಇದೇ ಅವಧಿಯಲ್ಲಿ ರಫ್ತು 55.45 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ವಿನಿಮಯ ಕೊರತೆ 20.88 ಶತಕೋಟಿ ಡಾಲರ್ ಆಗಿದೆ. ತೈಲ ಆಮದು ವೆಚ್ಚ ಶೇ.69ರಷ್ಟು ಹೆಚ್ಚಾಗಿದೆ.

# ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದು ಅತ್ಯಗತ್ಯ : ಒಡೆಯರ ಚಿತ್ರಶೇಖರ ಶ್ರೀ



ರಾಣೇಬೆನ್ನೂರು, ಮಾ14-ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವುದರ ಮೂಲಕ ಸಮಾಜದ ಏಳ್ಗೆಗಾಗಿ ಶ್ರಮಿಸುತ್ತಿರುವ ಶ್ರೀ ಕ್ಷೇತ್ರ ಧರ್ಮ ಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯ ನಿಜಕ್ಕೂ ಶ್ಲಾಘನೀಯ. ಇಂತಹ ಸಂಘದಲ್ಲಿ ಸೇರಿಕೊಂಡು ಆರ್ಥಿಕವಾಗಿ ಅಭಿವೃದ್ಧಿಯಲ್ಲಿ ಸಾಗಿ ಸಮಾಜದಲ್ಲಿ ತಮ್ಮದೇ ಆದ ಅಪಾರವಾದ ಕೊಡುಗೆಯನ್ನು ನೀಡಿದಾಗ, ಸಮಾಜದಲ್ಲಿ ತಾವುಗಳು ಆದರ್ಶರಾಗಿರಲು ಸಾಧ್ಯವಾಗುತ್ತದೆ ಎಂದು ಶ್ರೀ ಒಡೆಯರ ಚಿತ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ತಾಲ್ಲೂಕಿನ ಚೌಡಯ್ಯದಾನಾಪುರ ಗ್ರಾಮದ ಶ್ರೀ ಒಡೆಯರ ಸಂಸ್ಥಾನ ಮಠದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ (ರಾಣೇಬೆನ್ನೂರು), ಪ್ರಗತಿಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟ ಹೊನ್ನತ್ತಿ ವಲಯ ಮತ್ತು ಸ್ಥಳೀಯ ಎಲ್ಲಾ ಸಂಘ, ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಸಾಧನಾ ಸಮಾವೇಶವನ್ನು ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಮಾತನಾಡುವುದು ಸಾಧನೆಯಾಗಬಾರದು, ಸಾಧ ನೆಯೇ ಮಾತಾಗಬೇಕು ಎಂಬ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಪ್ರಾಮಾಣಿ ಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿರ್ದೇಶಕ ಸಂತೋಷಕುಮಾರ್ ಪಾಟೀಲ, ಜಿಪಂ

**ರಾಣೇಬೆನ್ನೂರು**

ಮಾಜಿ ಅಧ್ಯಕ್ಷ ಏಕನಾಥ ಭಾನುವಳ್ಳಿ, ಜಿಪಂ ಮಾಜಿ ಸದಸ್ಯೆ ಮಂಗಳಗೌರಿ ಪೂಜಾರ, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ನಿರ್ದೇಶಕಿ ಭಾರತಿ ಜಂಬಗಿ ಕಾರ್ಯಕ್ರಮ ಕುರಿತು ಮಾತನಾಡಿದರು. ಯೋಜನಾಧಿ ಕಾರಿ ಸತೀಶ ಶೇಟ್ ಪ್ರಾಸ್ತಾವಿಕ ಮಾತನಾಡಿದರು.

ತಾಪಂ ಮಾಜಿ ಉಪಾಧ್ಯಕ್ಷೆ ಪೂರ್ಣಿಮಾ ಕುರುವತ್ತಿ, ಗ್ರಾಪಂ ಅಧ್ಯಕ್ಷೆ ರತ್ನವ್ವ ಬನ್ನಿಮಟ್ಟಿ, ಸದಸ್ಯ ದೇವರಾಜ ಆನಿಶೆಟ್ರ, ಗ್ರಾಮದ ಮುಖಂಡರಾದ ಬಸಯ್ಯ ಪೂಜಾರ, ಶಂಭುಲಿಂಗಪ್ಪ ಭತ್ತದ, ಸಿದ್ದಪ್ಪ ನಾಗನೂರ, ಶರಣಬಸಪ್ಪ ಚಕ್ರಸಾಲಿ, ಬಸವರಾಜ ಬೆಳವಟಗಿ, ಶಿವಪ್ಪ ಕುರುವತ್ತಿ, ವಲಯ ಮೇಲ್ವಿಚಾರಕ ಸತೀಶ ಡಿ, ಅನಂತ ಕರೆಣ್ಣನವರ ಸೇವಾ ಪ್ರತಿನಿಧಿ ಸುನಿತಾ ಆನಿಶೆಟ್ರ, ಒಕ್ಕೂಟದ ಅಧ್ಯಕ್ಷೆ ವಿಜಯಲಕ್ಷ್ಮಿ ಬೆಳವಟಗಿಮಠ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಿಗೆ ನೆರೆ ದೇಶಗಳಲ್ಲಿ ಶಿಕ್ಷಣ

ನವದೆಹಲಿ, ಮಾ. 14 – ಸಮರ ಪೀಡಿತ ಉಕ್ರೇನ್‌ನಿಂದ ವಾಪಸ್ ಕರೆಸಲಾಗಿರುವ ವಿದ್ಯಾರ್ಥಿಗಳ ಕಾಳಜಿ ಬಗ್ಗೆ ಕ್ರಮ ವಹಿ ಸುವುದಾಗಿ ಕೇಂದ್ರ ಸರ್ಕಾರ ಲೋಕಸಭೆಗೆ ಭರವಸೆ ನೀಡಿದೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ವಿದ್ಯಾರ್ಥಿಗಳ ಕುರಿತು ಮಾತನಾಡಿದ್ದು, ಭಾರತೀಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಪೂರ್ಣಗೊಳಿಸುವಂತಾಗಲು ಉಕ್ರೇನ್ ನೆರೆ ದೇಶಗಳ ವಿಶ್ವವಿದ್ಯಾನಿಲಯಗಳ ಜೊತೆ ಮಾತುಕತೆ ನಡೆಸಲಾಗುತ್ತಿದೆ ಎಂದಿದ್ದಾರೆ.

ವಿದ್ಯಾರ್ಥಿಗಳು ಭವಿಷ್ಯದ ವೈದ್ಯರಾಗಲು ಅಗತ್ಯ ಎಲ್ಲ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಪ್ರಸಕ್ತ ವಿದ್ಯಾರ್ಥಿಗಳು ಆಘಾತದಿಂದ ಹೊರಬರುವಂತೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಲಾಗುತ್ತಿದೆ ಎಂದವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದರು, ಭಾರತದಲ್ಲೇ ವೈದ್ಯಕೀಯ ಶಿಕ್ಷಣ ಪೂರ್ಣಗೊಳಿಸಲು ಅವಕಾಶ ನೀಡುವ ನೀತಿ ರೂಪಿಸಬೇಕೆಂದು ಒತ್ತಾಯಿಸಿದರು.

ಕಾಂಗ್ರೆಸ್ ಸಂಸದ ರಾಜಮೋಹನ್ ಉನ್ನಿಥನ್ ಮಾತನಾಡಿ, ಕೇರಳದ ಸಾವಿರಾರು ವಿದ್ಯಾರ್ಥಿಗಳು ಈಗಲೂ ಉಕ್ರೇನ್‌ನ ಸುಮಿಯಲ್ಲಿ ಸಿಲುಕಿದ್ದಾರೆ. ಇವರನ್ನು ವಾಪಸ್ ಕರೆಸಿಕೊಳ್ಳಬೇಕು ಎಂದು ಹೇಳಿದರು.

ವೈ.ಎಸ್.ಆರ್.ಸಿ.ಪಿ. ಸಂಸದ ಪಿ.ವಿ. ಮಿಥುನ್ ರೆಡ್ಡಿ ಹಾಗೂ ಎಂ. ಶ್ರೀನಿವಾಸಲು ರೆಡ್ಡಿ ಮಾತನಾಡಿ, ಉಕ್ರೇನ್‌ನಿಂದ ರಕ್ಷಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಭಾರತದ ವೈದ್ಯಕೀಯ ಕಾಲೇಜುಗಳಲ್ಲಿ ಶಿಕ್ಷಣ ಮುಂದುವರೆಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಸಂಸದ ಕೊಡಿಕುನ್ನಿಲ್ ಸುರೇಶ್ ಮಾತನಾಡಿ, ವಿದ್ಯಾರ್ಥಿಗಳು ಉಕ್ರೇನ್ ಶಿಕ್ಷಣಕ್ಕೆ ಪಡೆದಿರುವ ಸಾಲ ಮನ್ನಾ ಮಾಡಬೇಕು. ಸಮರ ಕಾಯ್ದೆಯ ಅಂಶ ಬಳಸಿಕೊಂಡು ಅವರು ಸಾಲದ ಸುಳಿಯಲ್ಲಿ ಸಿಲುಕುವುದರಿಂದ ರಕ್ಷಿಸಬೇಕು ಎಂದು ಒತ್ತಾಯಿಸಿದರು.

## 19ಕ್ಕೆ ಕೊಡದಗುಡ್ಡದಲ್ಲಿ ತೇರು

ಜಗಳೂರು, ಮಾ.14- ತಾಲ್ಲೂಕಿನ ಕೊಡದಗುಡ್ಡದಲ್ಲಿ ಇದೇ ದಿನಾಂಕ 19 ರಂದು ಸಂಜೆ 4.30 ಕ್ಕೆ ಶ್ರೀ ವೀರಭದ್ರಸ್ವಾಮಿ ರಥೋತ್ಸವ ಜರುಗಲಿದೆ.




ರಥೋತ್ಸವದ ಅಂಗವಾಗಿ ದಿನಾಂಕ 15ರ ಮಂಗಳವಾರ ಕಂಕಣಧಾರಣೆ, ದಿನಾಂಕ 16 ರ ಬುಧವಾರ ಮಹಾಗಣಾರಾಧನೆ, ದಿನಾಂಕ 17 ರ ಗುರುವಾರ ಗಜವಾಹನೋತ್ಸವ, ದಿನಾಂಕ 18 ರ ಶುಕ್ರವಾರ ವೃಷಭ ವಾಹನೋತ್ಸವ ನಡೆಯಲಿದೆ.

ದಿನಾಂಕ 19 ರ ಶನಿವಾರ ಬೆಳಿಗ್ಗೆ 6 ಗಂಟೆಗೆ ಅಗ್ನಿಕುಂಡ ಮಹೋತ್ಸವ, ಸಂಜೆ 4.30 ಕ್ಕೆ ಮಹಾ ರಥೋತ್ಸವ ನಡೆಯುವುದು. ದಿನಾಂಕ 21 ರ ಸೋಮವಾರ ಬೆಳಿಗ್ಗೆ 6 ಗಂಟೆಗೆ ಓಕುಳಿ ಕಾರ್ಯಕ್ರಮ ನಡೆಯುವುದು.

ದಿನಾಂಕ 20 ಮತ್ತು 21 ರಂದು ಜಾತ್ರೆ ನಡೆಯುವುದು. ದಿನಾಂಕ 22 ರಿಂದ ದಿನಾಂಕ 31 ರವರೆಗೆ ಎತ್ತಿನ ಜಾತ್ರೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

## 20ಕ್ಕೆ ನಾಯಕನಹಟ್ಟಿ ತೇರು



ಚಳ್ಳಕೆರೆ ತಾಲ್ಲೂಕು ನಾಟಕನಹಟ್ಟಿ ಶ್ರೀ ಗುರು ತಿ ಪ್ಪೇ ರು ದ್ರ ಸ್ವಾ ಮಿ ಯ ರಥೋತ್ಸವವು ಇದೇ ದಿನಾಂಕ 20ರ ಭಾನುವಾರ ಜರುಗಲಿದೆ.

ಇಂದು ರಾತ್ರಿ ಮಯೂರ ವಾಹನೋತ್ಸವ, ದಿನಾಂಕ 16ರ ಬುಧವಾರ ಸಂಜೆ ಶ್ರೀಗಳ ರಥಕ್ಕೆ ಕಳಸ ಸ್ಥಾಪನೆ, ರಾತ್ರಿ ಗಜ ವಾಹನೋತ್ಸವ, ದಿನಾಂಕ 17ರ ಗುರುವಾರ ರಾತ್ರಿ ಸಿಂಹ ವಾಹನೋತ್ಸವ, ದಿನಾಂಕ 18ರ ಶುಕ್ರವಾರ ರಾತ್ರಿ ಅಶ್ವವಾಹನೋತ್ಸವ, ದಿನಾಂಕ 19ರ ಶನಿವಾರ ಶ್ರೀಗಳ ರಥಕ್ಕೆ ತೈಲಾಭಿಷೇಕವಿರುತ್ತದೆ.

ದಿನಾಂಕ 20ರಂದು ಮೆರವಣಿಗೆಯೊಂದಿಗೆ ಪ್ರಾತಃಕಾಲ ವೃಷಭ ವಾಹನಯುತ ಚಿಕ್ಕ ರಥೋ ತ್ಸವ ನಂತರ ದೊಡ್ಡ ರಥೋತ್ಸವ ಜರುಗಲಿದೆ.

## ಕೊಮಾರನಹಳ್ಳಿ ಬಳಿ ಅಪಘಾತ : ಸಾವು

ಮಲೇಬೆನ್ನೂರು, ಮಾ.14- ಕೆಎಸ್‌ಆರ್‌ಟಿಸಿ ಬಸ್ ಮತ್ತು ಬೈಕ್ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಬೈಕ್ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿದ ಘಟನೆ ಸೋಮವಾರ ಸಂಜೆ ಕೊಮಾರನಹಳ್ಳಿ ಕೆರೆ ಬಳಿ ನಡೆದಿದೆ.

ಚನ್ನಗಿರಿ ತಾ. ಗಾಣದಕಟ್ಟೆ ಗ್ರಾಮದ ಮಣಿಕಂಠ (26) ತಂದೆ ಹಾಲೇಶ್ ಎಂಬಾತ ಮೃತಪಟ್ಟ ದುರ್ದೈವಿ. ಬೈಕ್‌ನಲ್ಲಿ ಈತ ಒಬ್ಬನೇ ಇದ್ದನೆಂದು ಹೇಳಲಾಗಿದೆ.

ಕೆಎ 17 ಹೆಚ್‌ಡಿ 1890 ನಂಬರ್‌ನ ಪಲ್ಸರ್ ಬೈಕ್‌ನಲ್ಲಿ ಮಣಿಕಂಠ ಹೊನ್ನಾಳಿ ಕಡೆಯಿಂದ ಮಲೇಬೆನ್ನೂರು ಕಡೆಗೆ ಬರುತ್ತಿದ್ದ ಎನ್ನಲಾಗಿದೆ.

ಮಲೇಬೆನ್ನೂರಿನಿಂದ ಹೊನ್ನಾಳಿ ಕಡೆಗೆ ಹೊರಟಿದ್ದ ಕೆಎ 17 ಎಫ್ 1534 ನಂಬರಿನ ಕೆಎಸ್‌ಆರ್‌ಟಿಸಿ ಬಸ್ ಇನ್ನೊಂದು ಬೈಕ್ ತಪ್ಪಿಸಲು ಹೋಗಿ ಮಣಿ ಕಂಠನ ಬೈಕಿಗೆ ಡಿಕ್ಕಿ ಹೊಡೆದು ಕೊಮಾರನಹಳ್ಳಿ ಕೆರೆಯ ತಡೆಗೋಡೆಗೆ ಡಿಕ್ಕಿಯಾಗಿ ನಿಂತಿದೆ. ಕೆರೆಗೆ ತಡೆಗೋಡೆ ಇಲ್ಲದಿದ್ದರೆ ಬಸ್ ಕೆರೆಯಲ್ಲಿ ಬಿದ್ದು ದೊಡ್ಡ ಅನಾಹುತ ಸಂಭವಿಸುತ್ತಿತ್ತು ಎಂದು ಸ್ಥಳೀಯರು ತಿಳಿಸಿದರು.

ಪಿಎಸ್‌ಐ ರವಿಕುಮಾರ್ ಅವರು ಸ್ಥಳಕ್ಕೆ ಆಗಮಿಸಿ ಮಣಿಕಂಠನ ಶವವನ್ನು ಹರಿಹರ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿ ಶವ ಪರೀಕ್ಷೆ ಮಾಡಿಸಿ, ಅವರ ಕುಟುಂಬದವರಿಗೆ ನೀಡಿದರು. ಕೆಎಸ್‌ಆರ್‌ಟಿಸಿ ಬಸ್ ಚಾಲಕನ ವಿರುದ್ಧ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


## ಎನ್.ಕೆ. ಇಸ್ಮಾಯಿಲ್ ಅವರಿಗೆ ಮಾತೃ ವಿಯೋಗ



ದಾವಣಗೆರೆಯ ಮಾಗಾನಹಳ್ಳಿ ರಸ್ತೆ (ಎಸ್. ಆರ್. ಪೆಟ್ರೋಲ್ ಬಂಕ್ ಎದುರು) ಯ ನಿವಾಸಿ

**ಹಾಜಿ ವಜೀರಾ ಬೀ**

ಅವರು ದಿನಾಂಕ 14.03.2022ರ ಸೋಮವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ವಜೀರಾ ಬಿ, ಮಾಜಿ ಮುತುವಲ್ಲಿ ಮಸ್ಜಿದ್-ಎ-ಅಕ್ಸ ದಿ. ಅಲ್ ಹಾಜ್ ಎನ್.ಕೆ. ಖಾಜಾ ಸಾಬ್
ಅವರ ಧರ್ಮಪತ್ನಿ ಹಾಗೂ ದಾವಣಗೆರೆ ಮಹಾ ನಗರ ಪಾಲಿಕೆಯ ಮಾಜಿ ಸದಸ್ಯ
ಶ್ರೀ ಎನ್.ಕೆ ಇಸ್ಮಾಯಿಲ್ ಅವರ ತಾಯಿ. ಮೃತರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು.
ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು
ದಿನಾಂಕ 15.03.2022 ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ
ಪಿ.ಬಿ. ರಸ್ತೆಯ ಹಳೆ ಖಬರಸ್ತಾನದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

## ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀ ರುದ್ರಮೂರ್ತಿ ಎನ್.ಎಂ**
ಭಾರತಿ ಪ್ರಿಂಟಿಂಗ್ ಪ್ರೆಸ್, ಕಾಯಿಪೇಟೆ, ದಾವಣಗೆರೆ.
ನಿಧನ: 15.03.2021

*ನೀವು ನಮ್ಮನ್ನಗಲಿ ಒಂದು ವರ್ಷವಾಯಿತು. ಸದಾ ನಿಮ್ಮ ನೆನಪಿನಲ್ಲಿರುವ...*

**ಪತ್ನಿ, ಮಕ್ಕಳು, ಸಹೋದರ, ಸಹೋದರಿಯರು ಹಾಗೂ ನರಗುಂದ ವಂಶಸ್ಥರು, ದಾವಣಗೆರೆ**

## ಸವಿನೆನಪು



**ಲಿಂ. ಎ.ಆರ್ ಇಂದ್ರರಾಜಪ್ಪ**
ಲಿಂ. ದಿನಾಂಕ 15.03.2021

*ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ನೆನಪು ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ*

ಧರ್ಮಪತ್ನಿ : **ಶ್ರೀಮತಿ ಸುವರ್ಣಮ್ಮ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು ಸಹೋದರ, ಸಹೋದರಿಯರು ಆನೆಕೊಂಡದ ರೇವಕ್ಕ ವಂಶಸ್ಥರು, ಶಾಮನೂರು ಗಿರಿಯವ್ವಳರ ವಂಶಸ್ಥರು, ಬಂಧು-ಮಿತ್ರರು**

## ಸಣ್ಣಜ್ಜರ ಹಾಲಪ್ಪ ನಿಧನ



ದಾವಣಗೆರೆ ತಾಲ್ಲೂಕು, ತರಳಬಾಳು ನಗರ (6ನೇ ಕಲ್ಲು) ವಾಸಿ

**ಸಣ್ಣಜ್ಜರ ಹಾಲಪ್ಪ**

ಅವರು ದಿನಾಂಕ 14.03.2022ರ ಸೋಮವಾರ ಸಂಜೆ 4.45ಕ್ಕೆ ನಿಧನರಾದರು. ಮೃತರಿಗೆ 90 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.03.2022ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ತರಳಬಾಳು ನಗರದ ಮೃತರ ಜಮೀನಿನಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ:
**ಸಣ್ಣಜ್ಜರ ವಂಶಸ್ಥರು**
**ಮೊ: 97392 94940, 78993 01472**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 13.03.2022 ರ ಭಾನುವಾರ ನಿಧನರಾದ
ಭಾವಸಾರ ಕ್ಷತ್ರಿಯ ಸಮಾಜದ ಹಿರಿಯರೂ, ದಾವಣಗೆರೆ
ಭಾವಸಾರ ಕ್ಷತ್ರಿಯ ವಿದ್ಯಾವರ್ಧಕ ಸಂಘದ ಮಾಜಿ ಅಧ್ಯಕ್ಷರೂ ಆಗಿದ್ದ

**ಶ್ರೀ ಆತ್ಮಚರಣ ಬೊಂದಾಡೆ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು, ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು ಹಾಗೂ ಕಾರ್ಯಕಾರಿ ಮಂಡಳಿ ಮತ್ತು ಸದಸ್ಯರು**
**ಭಾವಸಾರ ಕ್ಷತ್ರಿಯ ವಿದ್ಯಾವರ್ಧಕ ಸಂಘ ದಾವಣಗೆರೆ**


## ಚಿಲ್ಲರೆ ಹಣದುಬ್ಬರ ಶೇ.6.07ಕ್ಕೆ ಏರಿಕೆ

ನವದೆಹಲಿ, ಮಾ. 14 – ಚಿಲ್ಲರೆ ಹಣದುಬ್ಬರ ಫೆಬ್ರವರಿಯಲ್ಲಿ ಎಂಟು ತಿಂಗಳಲ್ಲೇ ಅತಿ ಹೆಚ್ಚಿನ ಶೇ.6.07ಕ್ಕೆ ತಲುಪಿದೆ. ಸಗಟು ಹಣದುಬ್ಬರ ಇದೇ ಅವಧಿಯಲ್ಲಿ ಶೇ.13.11ಕ್ಕೆ ಹೆಚ್ಚಾಗಿದೆ.

ಈ ಹಿಂದೆ ಜೂನ್ 2021ರಲ್ಲಿ ಚಿಲ್ಲರೆ ಹಣದುಬ್ಬರ ಶೇ.6.26ರಷ್ಟಿತ್ತು. ರಿಸರ್ವ್ ಬ್ಯಾಂಕ್ ಹಣಕಾಸು ನೀತಿ ರೂಪಿಸುವಾಗ ಚಿಲ್ಲರೆ ಹಣದುಬ್ಬರ ಪರಿಗಣಿಸುತ್ತದೆ.


## ಮಂಜುಳಮ್ಮ ಗುತ್ತೂರು ನಿಧನ



ದಾವಣಗೆರೆ ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, ಮಾಗನೂರು ಬಸಪ್ಪ ಪೆಟ್ರೋಲ್ ಬಂಕ್ ಹಿಂಭಾಗ, ಮನೆ ನಂ.966/10ರ ವಾಸಿ ಗುತ್ತೂರು ಚಂದ್ರಶೇಖರಪ್ಪನವರ ಪತ್ನಿ ಶ್ರೀಮತಿ ಮಂಜುಳಮ್ಮ ಗುತ್ತೂರು ಅವರು ದಿನಾಂಕ: 14.3.2022ರ ಸೋಮವಾರ ಸಂಜೆ 6.45ಕ್ಕೆ ನಿಧನರಾದರು. ಅಂತ್ಯಕ್ರಿಯೆಯು ದಿನಾಂಕ: 15.3.2022ರ ಮಂಗಳವಾರ ಬೆ.11ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ.

ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮಾರ್ಚ್ 15, 2022

# ದುಗ್ಗಮ್ಮಗೆ ಇಂದು ಎಡೆ ಜಾತ್ರೆ, ನಾಳೆ ಚರುಗ

ದಾವಣಗೆರೆ, ಮಾ.14- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಅಂಗವಾಗಿ ನಾಳೆ ಮಂಗಳವಾರ ಅಮ್ಮನ ಎಡೆಜಾತ್ರೆ ಇರುತ್ತದೆ. ನಗರದ ಬಹುತೇಕ ಎಲ್ಲ ಜಾತಿ, ಜನಾಂಗದವರೂ ಸಹ ಅಪಾರ ಸಂಖ್ಯೆಯಲ್ಲಿ ಮೈಲುದ್ದದ ಸರತಿ ಸಾಲಿನಲ್ಲಿ ನಿಂತು

**ದುಗ್ಗಾವತಿಯಿಂದ ದುಂಡು ಕಲ್ಲಾಗಿ ಬಂದು ನೆಲೆಸಿದ ಅಮ್ಮ..!**

ದುಗ್ಗಮ್ಮನಿಗೆ ಸಿಹಿ ಎಡೆ, ಅದರಲ್ಲೂ ಹೋಳಿಗೆ ಮತ್ತು ಅನ್ನ-ಮೊಸರಿನ ನೈವೇದ್ಯ ಮಾಡುತ್ತಾರೆ.

ಬುಧವಾರ ಬೆಳಿಗ್ಗೆ ಚರುಗ ಚಲ್ಲುವ ಕಾರ್ಯ ಆರಂಭವಾಗುತ್ತಲೇ ಬೇವಿನ ಉಡುಗೆ, ದೀಡು ನಮಸ್ಕಾರ ಹಾಕುವ ಸೇವೆ ಆರಂಭವಾಗುತ್ತದೆ. ದೇವಸ್ಥಾನ ಮತ್ತು ಸೇವಾ ಸಂಘಗಳು ದೀಡು ನಮಸ್ಕಾರ ಹಾಕುವ ಭಕ್ತಾದಿಗಳಿಗೆ ನೀರಿನ ಅನುಕೂಲತೆ ಮಾಡಿರುತ್ತವೆ.



ಬಳ್ಳಾರಿಯಿಂದ ದಾವಣಗೆರೆ ಜಿಲ್ಲೆಗೆ ಸೇರಿ, ಮತ್ತೆ ಮರಳಿ ಬಳ್ಳಾರಿ ಜಿಲ್ಲೆಗೆ ಸೇರ್ಪಡೆಗೊಂಡು, ಇದೀಗ ನೂತನ ವಿಜಯನಗರ ಜಿಲ್ಲೆಯ ಭಾಗವಾಗಿರುವ ಹರಪನಹಳ್ಳಿ ತಾಲ್ಲೂಕಿನ ದುಗ್ಗಾವತಿ ಗ್ರಾಮವೇ ದಾವಣಗೆರೆ ನಗರದೇವತೆ ದುಗ್ಗಮ್ಮನ ಮೂಲ ಸ್ಥಾನವಾಗಿದೆ ಎಂಬ ಪ್ರತೀತಿ ಇದೆ.

ಸುಮಾರು ಎರಡು ನೂರು ವರ್ಷಗಳ ಹಿಂದಿನ ಮಾತು. ಆಗ ದೇಶ ಬ್ರಿಟೀಷರ ಕಪಿಮುಷ್ಟಿಯಲ್ಲಿದ್ದ ಕಾಲ. ಎಲ್ಲದಕ್ಕೂ ಕಂಪನಿ ಸರ್ಕಾರದ ಪರವಾನಗಿ ಬೇಕಿತ್ತು. ಈಗಿನ ಹಾಗೆ ಯಂತ್ರಚಾಲಿತ ವಾಹನಗಳ ಸೌಲಭ್ಯ ಇರಲಿಲ್ಲ. ಸರಕು ಸಾಗಣೆಗೆ ಮತ್ತು ಪ್ರಯಾಣಕ್ಕೆ ಚಕ್ಕಡಿಗಳು, ಕುದುರೆ ಬಂಡಿಗಳನ್ನು ಉಪಯೋಗಿಸಲಾಗು ತ್ತಿತ್ತು. ಸರ್ಕಾರಿ ಅಧಿಕಾರಿಗಳು, ಗಣ್ಯರು ಮತ್ತು ಯೋಧರು ಮಾತ್ರ ಕುದುರೆಗಳನ್ನು ಉಪಯೋಗಿಸುತ್ತಿದ್ದರಂತೆ, ಇನ್ನು ವೃದ್ಧರು ಮತ್ತು ಗಣ್ಯ ಮಹಿಳೆಯರು ಪ್ರಯಾಣ ಮಾಡುವಾಗ ಪಾಲಕಿ ಮತ್ತು ಡೋಲಿಗಳನ್ನು ಬಳಸಲಾಗುತ್ತಿತ್ತಂತೆ.

ಇಂತಹ ಕಾಲಘಟ್ಟದಲ್ಲಿ ದುಗ್ಗಾವತಿಯಿಂದ ಸರಕು ತುಂಬಿದ ಎತ್ತಿನ ಬಂಡಿಯೊಂದು ದಾವಣಗೆರೆಯತ್ತ ಹೊರಟು ಬಂತೆಂದು, ಆ ಬಂಡಿ ಸ್ವಲ್ಪ ಮುಂಭಾರವಾಗಿ ಮುಂಬಂಡಿ ಆದ ಕಾರಣ, ಬಂಡಿ ಹೊಡೆಯುವಾತ ಅಲ್ಲಿಯೇ ಇದ್ದ ದುಂಡು ಕಲ್ಲೊಂದನ್ನು ಎತ್ತಿ ತನ್ನ ಬಂಡಿಯ ಹಿಂಬಾರಕ್ಕೆಂದು ಇಟ್ಟುಕೊಂಡನಂತೆ, ಬಂಡಿ ನಡೆಸುತ್ತಾ ಈಗಿನ ದುಗ್ಗಮ್ಮನ ದೇವಾಲಯದ ಹಳೇ ರಸ್ತೆಯಲ್ಲಿ ಬರುತ್ತಿರಬೇಕಾದರೆ ಪವಾಡವೊಂದು ಘಟಿಸುತ್ತದೆಯಂತೆ.

ಆ ಬಂಡಿ ದುಂಡು ಕಲ್ಲಿನ ಭಾರ ತಾಳಲಾರದೆ ಮುರಿದು, ಬಂಡಿಯಲ್ಲಿದ್ದ ಆ ದುಂಡು ಕಲ್ಲು ಉರುಳಿಕೊಂಡು ರಸ್ತೆಯ ಬದಿಯಲ್ಲಿ ಬಿತ್ತಂತೆ, ಬಂಡಿ (4ನೇ ಪುಟಕ್ಕೆ)

# ವಸತಿ ಫಲಾನುಭವಿಗಳ ಆದಾಯ ಮಿತಿ ಹೆಚ್ಚಳ

**ಗ್ರಾಮೀಣ ಭಾಗದಲ್ಲಿ 1.20 ಲಕ್ಷ ರೂ., ನಗರ ಪ್ರದೇಶಗಳಲ್ಲಿ 3 ಲಕ್ಷ ರೂ.**

ಬೆಂಗಳೂರು, ಮಾ. 14 - ವಿವಿಧ ವಸತಿ ಯೋಜನೆಗಳ ಫಲಾನುಭವಿಗಳ ಆಯ್ಕೆಗೆ ನಿಗದಿಪಡಿಸಿರುವ ಆದಾಯ ಮಿತಿ ಹೆಚ್ಚಳ ಮಾಡಿ ಸರ್ಕಾರದಿಂದ ನಾಳೆಯೇ ಆದೇಶ ಹೊರಡಿಸಲಿದೆ.

ವಿಧಾನಸಭೆಯ ಪ್ರಶ್ನೋತ್ತರ ವೇಳೆಯಲ್ಲಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಿ.ಟಿ. ರವಿ, ರಘುಮೂರ್ತಿ ಸೇರಿದಂತೆ ಹಲವು ಸದಸ್ಯರು, ಆಶ್ರಯ ಯೋಜನೆಯಡಿ ಫಲಾನುಭವಿಗಳ ಆಯ್ಕೆಗೆ ನಿಗದಿ ಮಾಡಿರುವ ಆದಾಯ ಮಿತಿಯನ್ನು ಏರಿಸುವಂತೆ ಮಾಡಿದ ಪ್ರಸ್ತಾವಕ್ಕೆ ಸರ್ಕಾರ ತಕ್ಷಣವೇ ಸ್ಪಂದಿಸಿದೆ. ವಸತಿ ಸಚಿವ ವಿ. ಸೋಮಣ್ಣ, ಹಿಂದಿನ ಆಡಳಿತಗಳು ಈ ಆದಾಯ ಮಿತಿಯನ್ನು ನಿಗದಿಪಡಿಸಿವೆ, ಇದರಿಂದ ಯಾವ ಫಲಾನುಭವಿಗಳಿಗೂ ಸೂರು ದೊರಕಲು ಸಾಧ್ಯವಿಲ್ಲ, ಇದನ್ನು ಗಮನದಲ್ಲಿಟ್ಟುಕೊಂಡೇ ಆದಾಯ ಮಿತಿಯನ್ನು ಗಣನೀಯವಾಗಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿಸುವುದಾಗಿ ತಿಳಿಸಿದರು.

ಗ್ರಾಮೀಣ ಭಾಗಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಆದಾಯ ಮಿತಿಯನ್ನು 32,000 ರೂ.ಗೆ ನಿಗದಿಪಡಿಸಲಾಗಿತ್ತು, ಇನ್ನು ಮುಂದೆ ಇದನ್ನು ಗ್ರಾಮೀಣ ಪ್ರದೇಶಗಳಲ್ಲಿ 1.20 ಲಕ್ಷಕ್ಕೆ ಹಾಗೂ ನಗರ ಪ್ರದೇಶಗಳ ಲ್ಲಿದ್ದ ಆದಾಯ ಮಿತಿಯನ್ನು 87 ಸಾವಿರದಿಂದ 3 ಲಕ್ಷ ರೂ.ಗೆ ಏರಿಕೆ ಮಾಡುವುದಾಗಿ ಪ್ರಕಟಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಳೆ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡುವ ಸಂದರ್ಭದಲ್ಲೇ ಸರ್ಕಾರದ ಆದಾಯ ಮಿತಿ ಹೆಚ್ಚಿಸುವ ಘೋಷಣೆ ಮಾಡಲಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಸಾಮಾನ್ಯ ವರ್ಗದವರೆಂದು ಒಬ್ಬೊಬ್ಬರಿಗೂ ಒಂದೊಂದು ರೀತಿಯ ಮಾನದಂಡವಿದೆ. ಆದಾಯ ಮಿತಿ ಹೆಚ್ಚಳ (4ನೇ ಪುಟಕ್ಕೆ)

# 4,317 ಶಿಕ್ಷಕರಿಂದ ಎಸ್ಸೆಸ್ಸೆಲ್ಸಿ ಅಸಮರ್ಪಕ ಮೌಲ್ಯಮಾಪನ

**ಕ್ರಮ ತೆಗೆದುಕೊಳ್ಳಲಾಗುವುದು ಎಂದ ಸಚಿವ ನಾಗೇಶ್**

ಬೆಂಗಳೂರು, ಮಾ. 14 - ರಾಜ್ಯದಲ್ಲಿ 4,317 ಶಿಕ್ಷಕರು ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಅಸಮರ್ಪಕ ಮೌಲ್ಯಮಾಪನ ಮಾಡಿದ್ದು, ಭವಿಷ್ಯದ ಕನಸು ಕಟ್ಟಿಕೊಂಡು ಪರೀಕ್ಷೆ ಬರೆದ ವಿದ್ಯಾರ್ಥಿಗಳ ಜೀವನದಲ್ಲಿ ಚೆಲ್ಲಾಟವಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಎಚ್ಚರಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಎನ್.ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅಸಮರ್ಪಕ ಮೌಲ್ಯಮಾಪನ ಮಾಡಿದ ಶಿಕ್ಷಕರಿಂದ ಅಂಕದ ವ್ಯತ್ಯಾಸದ ಅನುಸಾರ 51,26,600 ರೂ. ದಂಡ ವಿಧಿಸಲಾಗಿದೆ, ಅದರಲ್ಲಿ 10,56,400 ರೂ. ವಸೂಲಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಆರರಿಂದ 10 ಅಂಕಗಳ ವ್ಯತ್ಯಾಸ ಮಾಡಿದ ಶಿಕ್ಷಕರಿಗೆ ಎಚ್ಚರಿಕೆ ನೀಡಲಾಗುವುದು, 11ರಿಂದ 15 ಮತ್ತು 15ರಿಂದ 20 ಅಂಕಗಳ ವ್ಯತ್ಯಾಸ ಮಾಡಿದ ಶಿಕ್ಷಕರನ್ನು ಎರಡು ಪರೀಕ್ಷೆಗಳ ಕರ್ತವ್ಯದಿಂದ ಅಮಾನತ್ತುಗೊಳಿಸಲಾಗುವುದು. 20ಕ್ಕಿಂತಲೂ ಹೆಚ್ಚು ಅಂಕಗಳ ವ್ಯತ್ಯಾಸ ಮಾಡಿದ ಶಿಕ್ಷಕರ ವಿರುದ್ಧ ಕಠಿಣ ಕ್ರಮ ಜರುಗಿಸುವ ಕುರಿತು ಅಧಿಕಾರಿಗಳ ಜೊತೆ ಚರ್ಚೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಮರುಮೌಲ್ಯಮಾಪನದಲ್ಲಿ ಶಿಕ್ಷಕರು ಅಂಕಗಳನ್ನು ವ್ಯತ್ಯಾಸ ಮಾಡಿರುವುದು ಪತ್ತೆಯಾಗಿದೆ, 19,826 ಅರ್ಜಿಗಳು ಮೌಲ್ಯಮಾಪನಕ್ಕೆ ಸಲ್ಲಿಕೆಯಾಗಿದ್ದವು. ಅದರಲ್ಲಿ ಆರಕ್ಕಿಂತ ಕಡಿಮೆ ಅಂಕ ವ್ಯತ್ಯಾಸವಾಗಿರುವ 15,591 ಪ್ರಕರಣಗಳಿವೆ. ಆರಕ್ಕಿಂತ ಹೆಚ್ಚು ಅಂಕ ವ್ಯತ್ಯಾಸವಾಗಿರುವುದು 4235 ಪ್ರಕರಣಗಳಿವೆ, ಈ ಪ್ರಕರಣಗಳನ್ನು ಮರುಮೌಲ್ಯಮಾಪನದಲ್ಲಿ ಸರಿಪಡಿಸಲಾಗಿದೆ. ಆರಕ್ಕಿಂತ ಹೆಚ್ಚು ಅಂಕ ವ್ಯತ್ಯಾಸ ಕಂಡು(4ನೇ ಪುಟಕ್ಕೆ)

# ಮುಜರಾಯಿ ದೇವಾಲಯಗಳ ಖಾಸಗಿ ಹಸ್ತಾಂತರ ಪ್ರಸ್ತಾಪ ಇಲ್ಲ

ಬೆಂಗಳೂರು, ಮಾ. 14 - ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ದೇವಾಲಯಗಳನ್ನು ಖಾಸಗಿಯವರಿಗೆ ಹಸ್ತಾಂತರ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಮುಜರಾಯಿ ಮತ್ತು ವಕ್ಫ್ ಖಾತೆ ಸಚಿವೆ ಶಶಿಕಲಾ ಜೊಲ್ಲೆ ವಿಧಾನಸಭೆಯಲ್ಲಿಂದು ಸ್ಪಷ್ಟಪಡಿಸಿದರು.

ಬಸನಗೌಡ ದದ್ದಲ್ ಪ್ರಶ್ನೆಗೆ ಜೊಲ್ಲೆ ಪರವಾಗಿ ಉತ್ತರಿಸಿದ ಆರ್. ಅಶೋಕ್, ಮುಜರಾಯಿ ಇಲಾಖೆಯ ದೇವಸ್ಥಾನಗಳನ್ನು ಖಾಸಗಿಯವರಿಗೆ ಹಸ್ತಾಂತರ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ,(4ನೇ ಪುಟಕ್ಕೆ)

# ಸಂಕೋಚ ಮೀರಿ ಅಸಮಾನತೆ ನಿವಾರಿಸಿಕೊಳ್ಳಿ

## ಮಹಿಳಾ ದಿನಾಚರಣೆಯಲ್ಲಿ ಇಸ್ರೋ ವಿಜ್ಞಾನಿ ಡಾ. ಟಿ.ಕೆ. ಅನುರಾಧ ಕರೆ

ದಾವಣಗೆರೆ, ಮಾ. 14 - ಮಹಿಳೆಗೆ ಯಾರೂ ಸಮಾನ ಸ್ಥಾನಮಾನವನ್ನು ಕರೆದು ಕೊಡುವುದಿಲ್ಲ. ಪ್ರತಿಯೊಂದು ವಲಯದಲ್ಲೂ, ಪ್ರತಿ ಹಂತದಲ್ಲೂ ಎದುರಾಗುವ ಅಸಮಾನತೆ ನಿವಾರಣೆಗೆ ಮಹಿಳೆ ತಾನೇ ಶ್ರಮಿಸಬೇಕಿದೆ ಎಂದು ಇಸ್ರೋ ಕೇಂದ್ರ ಕಚೇರಿಯ ಸ್ಯಾಟ್‌ಕಾಮ್ ಪ್ರೋಗ್ರಾಂನ ಮಾಜಿ ನಿರ್ದೇಶಕಿ ಡಾ. ಟಿ.ಕೆ. ಅನುರಾಧ ಹೇಳಿದ್ದಾರೆ.

ನಗರದ ಬಿ.ಐ.ಇ.ಟಿ.ಯಲ್ಲಿ ಆಯೋಜಿಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಪುರುಷರೇ ರೂಪಿಸಿದ ಸಮಾಜದಲ್ಲಿ ಮಹಿಳೆಯರಿಗೆ ಇಂದಿಗೂ ಸಮಾನತೆ ಸಾಧ್ಯವಾಗಿಲ್ಲ. ಅಸಮಾನತೆ ಮನೆಗಳಿಂದಲೇ ಆರಂಭವಾಗಿ, ಉದ್ಯೋಗ ತಾಣಗಳವರೆಗೂ ಮುಂದುವರೆದಿದೆ. ಇದನ್ನು ನಿವಾರಿಸಲು ಮಹಿಳೆಯರೇ ಮುಂದಾಗಬೇಕು ಎಂದವರು ತಿಳಿಸಿದರು.

ಮಹಿಳೆ ತಗ್ಗಿ ಬಗ್ಗಿ ನಡೆದುಕೊಳ್ಳಬೇಕು ಎಂಬುದು ಪುರುಷ ಪ್ರಧಾನ ಸಮಾಜದ ನಿರೀಕ್ಷೆ ಇದೆ. ಇದನ್ನು ಮೀರಿ ನಡೆದವರನ್ನು ಗಂಡುಬೀರಿ ಎಂದು ಜರಿಯುತ್ತಾರೆ. ಆದರೆ, ಉದ್ಯೋಗ ತಾಣಗಳಲ್ಲಿ ಮಹಿಳೆ ಸಂಕೋಚದಿಂದ ಹಿಂದೆ ಸರಿದರೆ, ಉಳಿದವರು ಆಕ್ರಮಣ ಸ್ವಭಾವ ತೋರುವ ಸಾಧ್ಯತೆ ಇರುತ್ತದೆ. ಹೀಗಾಗಿ ಮಹಿಳೆ ಹಿಂಜರಿಕೆ ತೋರಬಾರದು ಎಂದು ಅನುರಾಧ ತಿಳಿಸಿದರು.

ಮಗುವಿಗೆ ಶಿಕ್ಷಣ ಕೊಡುವುದರಲ್ಲೂ ಅಸಮಾನತೆ ಇದೆ. ನಾನು ಇದುವರೆಗೂ ಮನೆಗೆಲಸದ ಮಹಿಳೆ, ತನ್ನ ಮಗನನ್ನು ಕೆಲಸಕ್ಕಾಗಿ ಕರೆ ತಂದಿದ್ದನ್ನು ನೋಡಿಲ್ಲ. ಅವರೆಲ್ಲ ಶಾಲೆಗಳಲ್ಲಿ ಇರುತ್ತಾರೆ. ಉನ್ನತ ಕಲಿಕೆ ವಿಷಯ ಬಂದಾಗಲೂ ಹೆಣ್ಣಿನ ಆಯ್ಕೆಗಳು ಸೀಮಿತವಾಗುತ್ತವೆ ಎಂದವರು ವಿಷಾದಿಸಿದರು.

ಸುಶಿಕ್ಷಿತ ಸಮಾಜದಲ್ಲಿದ್ದರೂ ಹೆಣ್ಣು ಮಕ್ಕಳ ಸುರಕ್ಷತೆ ಬಗ್ಗೆ ಕಳವಳ ತಪ್ಪಿಲ್ಲ. ಸಂಜೆ ಮಗಳು ವಾಪಸ್ ಬರುವುದು ಕೆಲವು ನಿಮಿಷ ತಡವಾದರೂ ತಾಯಂದಿರಿಗೆ ತಳಮಳ ಆರಂಭವಾಗುತ್ತದೆ. ಇಂತಹ ಸಾಮಾಜಿಕ ಸ್ಥಿತಿ (4ನೇ ಪುಟಕ್ಕೆ)



### ಮದುವೆ ಗಂಡಿಗಾಗಿ ಪದವಿಯೇ?

ಸಾಮಾಜಿಕ ಕಾರ್ಯಕರ್ತರ ಪರಿಶ್ರಮ ಹಾಗೂ ಸರ್ಕಾರದ ನೀತಿಗಳಿಂದಾಗಿ ಮಹಿಳೆಗೆ ಕಳೆದ ಏಳು ದಶಕಗಳಲ್ಲಿ ಹೆಚ್ಚಿನ ಸ್ಥಾನಮಾನಗಳು ದೊರೆತಿವೆ. ಅದರಲ್ಲೂ ಶಿಕ್ಷಣ ಹಾಗೂ ವೈದ್ಯಕೀಯ ವಲಯಗಳಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಾಗಿದೆ. ಆದರೆ, ವೈದ್ಯಕೀಯ ಮತ್ತು ಶಿಕ್ಷಣ ಹೊರತು ಪಡಿಸಿ ಬೇರೆ ವಲಯಗಳಲ್ಲಿ ಈಗಲೂ ಉದ್ಯೋಗದಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆ ಇದೆ. ಇದನ್ನು ನೋಡಿದಾಗ ಮಹಿಳೆಯನ್ನು ಪದವಿವರೆಗೆ ಓದಿಸುವುದು ಒಳ್ಳೆಯ ಗಂಡ ಸಿಗಲಿ ಎಂಬ ಏಕೈಕ ಕಾರಣಕ್ಕಾ? ಎಂಬ ಪ್ರಶ್ನೆ ಮೂಡುತ್ತದೆ ಎಂದು ಡಾ. ಟಿ.ಕೆ. ಅನುರಾಧ ಪ್ರಶ್ನೆ ಮುಂದಿಟ್ಟರು.

### ಸುತ್ತಿಗೆ ಹಿಡಿದು ಬನ್ನಿ

ಉದ್ಯೋಗ ಬಡ್ತಿ ಪಡೆಯುವಲ್ಲಿ ಮಹಿಳೆಗೆ ಹಲವು ಅಡ್ಡಿಗಳಿವೆ. ನೋಂದಾಯಿತ ಕಂಪನಿಗಳ ಸಿ.ಇ.ಒ. ಹುದ್ದೆಗಳಲ್ಲಿ ಶೇ.5ರಷ್ಟು ಮಾತ್ರ ಮಹಿಳೆಯರಿದ್ದಾರೆ ಎಂದು ಮೊನಿ ಕಂಟ್ರೋಲ್ಸ್ ವರದಿ ತಿಳಿಸಿದೆ.

ಉದ್ಯೋಗ ಪ್ರವೇಶದಲ್ಲಿ ಸಮಾನತೆ ಇದೆ. ಆದರೆ, ಬಡ್ತಿಯಲ್ಲಿ ಅಡ್ಡಿಗಳಿವೆ. ಮಹಿಳೆ ಉನ್ನತ ಹುದ್ದೆಗೆ ಬರಲು ಇರುವ ಅಡ್ಡಿಗಳನ್ನು ತಾನೇ ನಿವಾರಿಸಿಕೊಳ್ಳಬೇಕಿದೆ. ಅಡ್ಡಿಗಳನ್ನು ಒಡೆದು ಹಾಕಲು 'ಸುತ್ತಿಗೆ' ಯನ್ನು ಮಹಿಳೆಯರೇ ಹಿಡಿದು ಕಚೇರಿಗಳಿಗೆ ಬರಬೇಕು ಎಂದು ಡಾ. ಟಿ.ಕೆ. ಅನುರಾಧ ಹೇಳಿದರು.

ಸುರಕ್ಷತೆ ಹಾಗೂ ಗೌರವದ ಹೆಸರಿನಲ್ಲಿ ಮಹಿಳೆಯನ್ನು ಕಚೇರಿಗಳಲ್ಲಿ ಪ್ರತ್ಯೇಕವಾಗಿ ಕಾಣಲಾಗುತ್ತದೆ. ನಾನು ಇಸ್ರೋದಲ್ಲಿದ್ದಾಗ ಉಪಗ್ರಹ ಪರೀಕ್ಷಿಸುವ ಕೆಲಸ ನಿರ್ವಹಿಸುತ್ತಿದ್ದೆ. ಉಪಗ್ರಹ ಪರೀಕ್ಷಿಸುವ ಏಣಿ ಹತ್ತದಂತೆ ಕಿರಿಯ ಪುರುಷ ಸಹೋದ್ಯೋಗಿಗಳು ಕಾಳಜಿ ತೋರುತ್ತಿದ್ದರು. ಆದರೆ, ಮಹಿಳೆ ಎಂಬ ಕಾರಣಕ್ಕಾಗಿ ಭೇದ ತೋರದಂತೆ ಸೂಕ್ಷ್ಮವಾಗಿ ಅವರಿಗೆ ತಿಳಿಸಿದ್ದೆ ಎಂದು ಅನುರಾಧ ತಿಳಿಸಿದರು.

# ಜಾತಿ ಸೂಚಕ ಗ್ರಾಮಗಳ ಹೆಸರು ರದ್ಧತಿಗೆ ನಿರ್ಧಾರ: ಅಶೋಕ್

ಬೆಂಗಳೂರು, ಮಾ. 14 - ರಾಜ್ಯದಲ್ಲಿ ಇನ್ನು ಮುಂದೆ ಜಾತಿ ಸೂಚಕ ಹೆಸರಿರುವ ಗ್ರಾಮಗಳನ್ನು ರದ್ದುಪಡಿಸಲು ತತ್‌ಕ್ಷಣವೇ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಕಂದಾಯ ಸಚಿವ ಆರ್.ಅಶೋಕ್ ವಿಧಾನಸಭೆಗೆ ತಿಳಿಸಿದರು.



ಬಸನಗೌಡ ತುರವಿಹಾಳ್ ಪ್ರಶ್ನೆಗೆ ಉತ್ತರಿಸಿದ ಅವರು, ಕೆಲವು ಕಡೆ ವಡ್ಡರ ಹಟ್ಟಿ, ಕುರುಬರ ಹಟ್ಟಿ ಎಂಬುದಾಗಿ ಹಲವು ರೀತಿಯ ಜಾತಿ ಸೂಚಕ ಹೆಸರಿನಲ್ಲಿ ಗ್ರಾಮಗಳಿಗೆ ನಾಮಕರಣ ಮಾಡಿಕೊಂಡಿದ್ದಾರೆ. ತಕ್ಷಣವೇ ಜಾತಿ ಹೆಸರುಗಳನ್ನು ತೆಗೆದು ಹಾಕಲು ಸೂಚನೆ ನೀಡುವುದಾಗಿ ಹೇಳಿದರು.

ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ನಾಯಕರ ಹಟ್ಟಿ, ಮಜರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್ ಕಾಲೋನಿ ಇತರೆ ದಾಖಲೆ ರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಬೇಕು. ಇದು ಒಂದೆರಡು ತಿಂಗಳಲ್ಲಿ ನಡೆಯುವ ಪ್ರಕ್ರಿಯೆ ಅಲ್ಲ. ಎಷ್ಟೇ ವೇಗವಾಗಿ ಪ್ರಕ್ರಿಯೆಗಳು ನಡೆದರೂ ಕನಿಷ್ಠ 8 ರಿಂದ 9 ತಿಂಗಳು ಬೇಕಾಗುತ್ತದೆ ಎಂದರು.

ರಾಜ್ಯದಲ್ಲಿರುವ ಲಂಬಾಣಿ, ಗೊಲ್ಲ, ಭೋವಿ, (5ನೇ ಪುಟಕ್ಕೆ)

# ಖಾತೆ, ಪಕ್ಷಕ್ಕೆ ಹೊರೆ ಆಗಿರುವ ಸಚಿವರ ಬಗ್ಗೆ ಸಿಎಂ ಗಮನಿಸಲಿ



ಬೆಂಗಳೂರು, ಮಾ. 14 - ಖಾತೆಗೂ, ಪಕ್ಷಕ್ಕೂ ನ್ಯಾಯ ನೀಡದೇ ಹೊರೆ ಆಗಿರುವ ಸಚಿವರ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗಮನಹರಿಸಲಿ ಎಂದು ಹೇಳುವ ಮೂಲಕ ಸಂಪುಟ ಪುನರ್‌ರಚನೆ ಬಗ್ಗೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ ರವಿ ಸುಳಿವು ನೀಡಿದ್ದಾರೆ.

ರಾಜ್ಯದಲ್ಲಿ ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ವಿಧಾನಸೌಧದಲ್ಲಿ ಮಾತನಾಡಿದ ಅವರು, ಇವತ್ತು ಹಲವು ಕಾರ್ಯಕರ್ತರು ಬಂದು ಭೇಟಿ ಆಗಿದ್ದರು. ನಿಗಮ ಮಂಡಳಿ ನೇಮಕ ವಿಳಂಬಕ್ಕೆ ಹಲವು ಕಾರ್ಯಕರ್ತರ ಅಸಮಾಧಾನ ಇದೆ. ಹಲವರು (4ನೇ ಪುಟಕ್ಕೆ)

# ಸಂಭ್ರಮದಿಂದ ನಡೆದ ಕೂಲಹಳ್ಳಿಯ ಶ್ರೀ ಗೋಣಿ ಬಸವೇಶ್ವರಸ್ವಾಮಿ ರಥೋತ್ಸವ



ಹರಪನಹಳ್ಳಿ, ಮಾ.14- ಪಂಚಗಣಾಧೀಶ್ವರರಲ್ಲಿ ಒಬ್ಬರಾದ ತಾಲ್ಲೂಕಿನ ಐತಿಹಾಸಿಕ ಕೂಲಹಳ್ಳಿಯ ಶ್ರೀ ಗೋಣಿ ಬಸವೇಶ್ವರಸ್ವಾಮಿ ರಥೋತ್ಸವವು ಅಪಾರ ಭಕ್ತರ ಮಧ್ಯೆ ಅತ್ಯಂತ ಶ್ರದ್ಧಾಭಕ್ತಿಗಳಿಂದ ಜರುಗಿತು.

ಊರ ಹೊರವಲಯದಲ್ಲಿ ನಿರ್ಮಿಸಿದ್ದ ಆಕರ್ಷಕ ರಥಕ್ಕೆ ವಿವಿಧ ಬಣ್ಣಗಳ ಬಾವುಟ ಹಾಗೂ ಹಲವು ದೇವಾನುದೇವತೆಗಳ ಭಾವಚಿತ್ರ ಅಳವಡಿಕೆಯ ಜೊತೆಗೆ, ಬಾಳೆದಿಂಡು, ಮಾವಿನ ತೋರಣ ಹಾಗೂ ಪುಷ್ಪ ಮಾಲೆಯೊಂದಿಗೆ ಅಲಂಕರಿಸಲಾಗಿತ್ತು.

ಚಿನ್ಮಯ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ರಥವನ್ನು ಐದು ಸುತ್ತು ಪ್ರದಕ್ಷಿಣೆ ಹಾಕಿದ ನಂತರ ಗೋಣಿ ಬಸವೇಶ್ವರರ ಪಟ (ಧ್ವಜ)ವನ್ನು ಬಹಿರಂಗ ಹರಾಜು ಮಾಡಲಾಯಿತು. ನಂತರ ಕೊಟ್ಟೂರೇಶ್ವರ ಉತ್ಸವ ಮೂರ್ತಿಯನ್ನು ರಥ ಮಂಟಪದಲ್ಲಿ ಪ್ರತಿಷ್ಠಾಪಿಸುವ ಮೂಲಕ ಅರ್ಚಕರು ಮಹಾ ಮಂಗಳಾರತಿ ನೆರವೇರಿಸುತ್ತಿದ್ದಂತೆಯೇ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಹರಕೆ ಹೊತ್ತಿದ್ದ ಭಕ್ತರು ರಥಕ್ಕೆ ತೆಂಗಿನಕಾಯಿ, ಬಾಳೇಹಣ್ಣು ಹಾಗೂ ಮೆಣಸು ತೂರಿ ಹರಕೆ ಸಮರ್ಪಿಸಿದರು. ಚಿತ್ರದುರ್ಗ ದಾವಣಗೆರೆ, ಬಳ್ಳಾರಿ, ಗದಗ ಹಾಗೂ ಹಾವೇರಿ ಜಿಲ್ಲೆಗಳು ಸೇರಿದಂತೆ ನಾಡಿನಾದ್ಯಂತ ಭಕ್ತ ಸಾಗರವೇ ರಥೋತ್ಸವದ ಸಂಭ್ರಮಕ್ಕೆ ಸಾಕ್ಷಿಯಾದರು.

ರಥೋತ್ಸವಕ್ಕೆ ಒಂದು ದಿನ ಮುಂಚೆ ಮಾ.13 ರಂದು ಭಾನುವಾರ ಬೆಳಿಗ್ಗೆ 10.12ಕ್ಕೆ ಸಿದ್ಧಗೊಂಡ ರಥದ ಗಾಲಿಗಳು ಸ್ವಯಂ ಚಾಲಿತವಾಗಿ ತನ್ನಷ್ಟಕ್ಕೆ ತಾನೇ ಒಂದು ಅಡಿ ಹಿಂದಕ್ಕೆ ಚಲಿಸಿದ್ದು, ಕೆಲವರು ಭಯಗೊಂಡರೆ ಇನ್ನೂ ಕೆಲವರು ಇದೂ ಸಹ ಒಂದು ಗೋಣಿಬಸವೇಶ್ವರರ ಪವಾಡ ಎಂದು ಕೂಲಹಳ್ಳಿಯಲ್ಲಿ ಮಾತನಾಡುತ್ತಿದ್ದರು.

ಎಲ್ಲಡೆ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಈ ವೇಳೆ ಕೂಲಹಳ್ಳಿ ಗ್ರಾ.ಪಂ ಅಧ್ಯಕ್ಷ ಮಂಜುನಾಥ ಟಿ. ಉಪಾಧ್ಯಕ್ಷೆ ಭೋವಿ ಪುಷ್ಪ ನೀಲಗುಂದ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹೆಚ್.ಬಿ. ಪರಶುರಾಮಪ್ಪ ಮತ್ತು ಇತರರಿದ್ದರು.


# ಉಜ್ಜಯಿನಿ ಜಗದ್ಗುರುಗಳ ಪೂರ್ವಾಶ್ರಮ ಹಿರೇಮಠದ ಅಭಿವೃದ್ಧಿಗೆ ಶಂಕುಸ್ಥಾಪನೆ

ರಾಣೇಬೆನ್ನೂರು, ಮಾ.14- ಶಿವಮೊಗ್ಗ ಸಂಸದ ಬಿ. ವೈ. ರಾಘವೇಂದ್ರ ಅವರ ಸಹಕಾರದಿಂದ ನಮ್ಮ ಪೂರ್ವಾಶ್ರಮ ಹಿರೇಮಠದ ಅಭಿವೃದ್ಧಿಯಾಗಲಿದೆ ಎಂದು ಉಜ್ಜಯಿನಿ ಜಗದ್ಗುರು ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ಶ್ರೀಗಳು ತಾಲ್ಲೂಕಿನ ಮುದೇನೂರು ಹಿರೇಮಠದ ಆವರಣದಲ್ಲಿ ನಿರ್ಮಿಸುತ್ತಿರುವ ಸಮುದಾಯ ಭವನದ ಶಂಕುಸ್ಥಾಪನೆ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು.

ತುಂಗಭದ್ರ ಹಾಗೂ ಕುಮದ್ವತಿ ಸಂಗಮದ ಬಳಿ ಮುಕ್ಕುಡೇಶ್ವರ ಮುನಿಗಳು ನೆಲೆಸಿದ್ದ ಈ ಗ್ರಾಮವನ್ನು ದಿನಗಳು ಉರುಳಿದಂತೆ ಮುದೇನೂರು ಎನ್ನಲಾಗುತ್ತಿದೆ. ಮೈಸೂರು ನಗರದ ಮಾದರಿಯಲ್ಲಿ ಶಿವಮೊಗ್ಗ ನಗರವನ್ನು ಅಭಿವೃದ್ಧಿ ಪಡಿಸಿದ ಯಡಿಯೂರಪ್ಪ ಹಾಗೂ ರಾಘವೇಂದ್ರ ಅವರ ಕಾರ್ಯ ಶ್ಲಾಘನೀಯವಾದುದು ಎಂದು ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮದ ಹಾಗೂ ಸುತ್ತಲಿನ ಬಡವರಿಗೆ ಅನುಕೂಲವಾಗಲಿ ಎಂದು 2 ಕೋಟಿ ರೂ. ಅನುದಾನದಲ್ಲಿ ನೀರಾವರಿ ನಿಗಮದಿಂದ ಹಿರೇಮಠದ ಆವರಣದಲ್ಲಿ ಸಮುದಾಯ ಭವನ ನಿರ್ಮಿಸಲಾಗುತ್ತಿದೆ. ಜೊತೆಗೆ ಯಾತ್ರಿ ನಿವಾಸ ಮತ್ತು ಮಠದ ಬಳಿಯ ನದಿ ತೀರಕ್ಕೆ ತಡೆಗೋಡೆ ನಿರ್ಮಿಸಲಾಗುವುದು ಎಂದು ಕಾಮಗಾರಿಯ ಶಂಕುಸ್ಥಾಪನೆ ಮಾಡಿದ ಸಂಸದ ಬಿ.ವೈ. ರಾಘವೇಂದ್ರ ಹೇಳಿ ತಮ್ಮ ಕುಟುಂಬ ಮತ್ತು ಮಠದ ಅವಿನಾಭಾವ ಸಂಬಂಧ ಹಂಚಿಕೊಂಡರು.



ಇಬ್ಬರು ಜಗದ್ಗುರುಗಳು: ಶ್ರೀ ಶೈಲ ಪೀಠದ ಅಭಿವೃದ್ಧಿ ಹಾಗೂ ಪೀಠದ ಭಕ್ತರ ಏಳಿಗೆಗೆ ಒತ್ತುಕೊಟ್ಟ ಲಿಂಗೈಕ್ಯ ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯರು ಹಾಗೂ ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ದಲಿಂಗ ಶಿವಾಚಾರ್ಯ ಶ್ರೀಗಳು ಸೇರಿದಂತೆ ಇಬ್ಬರು ಜಗದ್ಗುರುಗಳನ್ನು ನೀಡಿದ ಕೀರ್ತಿ ಮುದೇನೂರಿನ ಹಿರೇಮಠದ್ದು. ಈಗ ಈ ಮಠದ ಅಭಿವೃದ್ಧಿಗೆ ಒಳ್ಳೆಯ ಕಾಲ ಒದಗಿದೆ. ಈ ಮಠವು ರಾಜ್ಯದ ಗಮನ ಸೆಳೆಯುವ ಪ್ರವಾಸಿ ತಾಣವಾಗಬೇಕು ಎಂದು ಹೊನ್ನಾಳಿ ಹಿರೇಕಲ್ಮಠದ ಡಾ.ಒಡೆಯರ ಚನ್ನಮಲ್ಲಿಕಾರ್ಜುನ ಸ್ವಾಮಿ ಹೇಳಿದರು.

ಗ್ರಾಮ ಪಂಚಾಯ್ತಿ ಅಧ್ಯಕ್ಷ ಬೀರಪ್ಪ, ಉಪಾಧ್ಯಕ್ಷೆ ಮಂಜುಳಾ, ಜಿಪಂ ಮಾಜಿ ಅಧ್ಯಕ್ಷ ಎಸ್.ಎಸ್. ರಾಮಲಿಂಗಣ್ಣನವರ, ವಾಯುವ್ಯ ಸಾರಿಗೆ ನಿರ್ದೇಶಕ ಸಂತೋಷ ಪಾಟೀಲ, ರಾಣೇಬೆನ್ನೂರು ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ನೀರಾವರಿ ನಿಗಮದ ಅಧಿಕಾರಿಗಳಾದ ಶಿವಾನಂದ ಬಣಕಾರ, ನಟರಾಜ ಪಾಟೀಲ ಮತ್ತಿತರರಿದ್ದರು.



## ಅಮ್ಮನ ಜಾತ್ರೆಗೆ ಕುಂಬಾರರ ಸೇವೆ

ದಾವಣಗೆರೆ,ಮಾ.14- ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಗೆ ನಗರದ ಕುಂಬಾರ ಸಮಾಜದವರು ಮಡಕೆಗಳನ್ನು ಹೊಸದಾಗಿ ಸಿದ್ಧಪಡಿಸಿ, ಪೇರಿಸುತ್ತಿರುವುದು. ನಾಳೆ ಚರುಗಕ್ಕೆ ಜೋಳದ ಕಾಳುಗಳನ್ನು ಬೇಯಿಸಲು ಈ ಮಡಕೆಗಳನ್ನು ಬಳಸಲಾಗುತ್ತದೆ.

## ಬಿಜೆಪಿ ರಾಜ್ಯಗಳಲ್ಲಿ 'ದಿ ಕಾಶ್ಮೀರ್ ಫೈಲ್ಸ್'ಗೆ ವಿನಾಯಿತಿ

ನವದೆಹಲಿ, ಮಾ. 14 – ಬಿಜೆಪಿ ಆಡಳಿತದ ಇನ್ನಷ್ಟು ರಾಜ್ಯಗಳು 'ದಿ ಕಾಶ್ಮೀರ್ ಫೈಲ್ಸ್' ಚಿತ್ರಕ್ಕೆ ತೆರಿಗೆ ವಿನಾಯಿತಿ ನೀಡಿವೆ.

ಕರ್ನಾಟಕ, ಗುಜರಾತ್ ಹಾಗೂ ಮಧ್ಯ ಪ್ರದೇಶಗಳು ಈಗಾಗಲೇ ಮನರಂಜನಾ ತೆರಿಗೆ ವಿನಾಯಿತಿ ನೀಡಿದ್ದವು. ತ್ರಿಪುರ ಹಾಗೂ ಗೋವಾಗಳೂ ಸಹ ಸೋಮವಾರ ತೆರಿಗೆ ವಿನಾಯಿತಿ ನೀಡಿವೆ. ಕಳೆದ ವಾರ ಬಿಡುಗಡೆಯಾದ ಈ ಚಿತ್ರ ಕಾಶ್ಮೀರಿ ಪಂಡಿತರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ.

# ಜೀವ ಉಳಿಸಿದವರಿಗೆ ಕೃತಜ್ಞತೆ, ಜೀವನಕ್ಕೆ ನೆರವಾಗಲು ಕೋರಿಕೆ

ದಾವಣಗೆರೆ, ಮಾ. 14 - ಸಮರ ಪೀಡಿತ ಉಕ್ರೇನ್‌ನಿಂದ ಜೀವ ಕೈಯಲ್ಲಿ ಹಿಡಿದು ಬಂದ ವಿದ್ಯಾರ್ಥಿಗಳು ತಮಗೆ ನೆರವಾದ ಪ್ರಧಾನಿಯಿಂದ ಹಿಡಿದು ಶಾಸಕರು, ಅಧಿಕಾರಿಗಳಿಗೆ ಹೃದಯ ಪೂರ್ವಕವಾಗಿ ಧನ್ಯವಾದ ಸಲ್ಲಿಸಿದ್ದಾರೆ.

ಅದೇ ವೇಳೆ, ವೈದ್ಯಕೀಯ ವಿದ್ಯಾಭ್ಯಾಸ ಮುಂದುವರಿಕೆಯ ಬಗ್ಗೆ ಕಳವಳಗೊಂಡಿದ್ದಾರೆ. ಬದುಕು ಕಟ್ಟಿಕೊಳ್ಳಲು ಮುಂದಿನ ವಿದ್ಯಾಭ್ಯಾಸಕ್ಕೆ ನೆರವಾಗುವಂತೆ ಅವರು ಜಿಲ್ಲಾಡಳಿತದ ಮೂಲಕ ಮುಖ್ಯಮಂತ್ರಿ ಹಾಗೂ ಪ್ರಧಾನ ಮಂತ್ರಿಗೆ ಮನವಿ ಸಲ್ಲಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಮಾತನಾಡಿದ ವಿದ್ಯಾರ್ಥಿಗಳು ಹಾಗೂ ಪೋಷಕರು, ತಮಗೆ ನೆರವು ನೀಡಿದ ರಾಯಭಾರಿ ಕಚೇರಿ ಅಧಿಕಾರಿಗಳು, ಸಂಸದರು, ಶಾಸಕರು, ಕೇಂದ್ರ ಹಾಗೂ ರಾಜ್ಯ ಸಚಿವರು, ಜಿಲ್ಲಾಡಳಿತ ಹಾಗೂ ವಿಶೇಷವಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಸಲ್ಲಿಸಿದರು.

ಕೆಲ ವಿದ್ಯಾರ್ಥಿಗಳು ತಾವೇ ಬಸ್



ಮಾಡಿಕೊಂಡು ಸ್ಲೋವೇಕಿಯಾ ಗಡಿಯವರೆಗೆ ತೆರಳಿದ್ದನ್ನು ರೋಹಿತ್ ವಿವರಿಸಿದರು. ಖಾರ್ಕೀವ್ ಬಂಕರ್‌ನಲ್ಲಿ, ನಂತರ ಪಿಸೋಚಿನ್‌ನಲ್ಲಿ ಸಿಲುಕಿದ್ದನ್ನು ಗಗನ್ ದೀಪ್ ಜೈನ್ ತಿಳಿಸಿದರು.

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರಿಗೆ ಬಿಟ್ಟೂ ಬಿಡದೆ ಕರೆ ಮಾಡಿ ನೆರವಿನ ಮೊರೆ ಇಟ್ಟಿದ್ದ, ಮಾಜಿ ಕೇಂದ್ರ ಸಚಿವ ಅನಂತಕುಮಾರ್ ಅವರ ಪತ್ನಿ ವಿನೀತ ಸಂಪರ್ಕಿಸಿ ನೆರವು ಪಡೆದ ವಿಷಯವನ್ನು ವಿನಯ್ ಕಲ್ಲಿಹಾಳ್ ಅವರ ತಾಯಿ ಸುಮ ಕಲ್ಲಿಹಾಳ್ ತಿಳಿಸಿದರು.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ಮೂಲಕ ನೆರವು ದೊರೆತ ವಿಷಯವನ್ನು ಕುಶಾಲ್ ಹೇಳಿದರೆ, ಚರ್ನೋಬಿಲ್ ಅಣು ಘಟಕದ ಬಳಿ ಸಿಲುಕಿ ಕಂಗಾಲಾಗಿದ್ದ ವಿಷಯವನ್ನು ಪ್ರಿಯ ಹೇಳಿದರು.

ಖಾರ್ಕೀವ್ ರೈಲು ಹತ್ತಲು ತಮಗೆ ಅವಕಾಶ ಕೊಡದೇ ಸಮಸ್ಯೆಯಾಗಿದ್ದನ್ನು ಆದರ್ಶ್ ಹೇಳಿದರು. ಅವರ ತಾಯಿ ಜಯಮ್ಮ ಮಾತನಾಡಿ, ಜಗಳೂರಿನ ಶಾಸಕ ಎಸ್.ವಿ. ರಾಮಚಂದ್ರ ಅವರು ತಾವೇ ಆದರ್ಶ್‌ನನ್ನು ಬೆಂಗಳೂರಿಗೆ ಹೋಗಿ ಕರೆದುಕೊಂಡು ಬಂದ ವಿಷಯ ತಿಳಿಸಿದರು.

ಪೂರ್ವದ ಸಮರ ಪೀಡಿತ ಪ್ರದೇಶದಲ್ಲಿ ಸಿಲುಕಿ ಸಮಸ್ಯೆ ಎದುರಿಸಿದ್ದನ್ನು ತಿಳಿಸಿದ ಬಾದಾಮಿ ವೀರೇಶ್, ರೈಲು ಹತ್ತದಂತೆ ಸೈನಿಕರು ಗಾಳಿಯಲ್ಲಿ ಗುಂಡು ಹಾರಿಸಿ ಓಡಿಸಿದ್ದರು. ಖಾರ್ಕೀವ್‌ನಿಂದ ಭಾರತದ ಬಾವುಟ ಹಿಡಿದು 30 ಕಿ.ಮೀ. ದೂರದ ಪಿಸೋಚಿನ್‌ಗೆ ಹೆಚ್ಚೂ ಕಡಿಮೆ ಓಡಿಕೊಂಡೇ ತಲುಪಿದೆವು ಎಂದು ತಿಳಿಸಿದರು.

ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದ ನಂತರ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಉಕ್ರೇನ್‌ನಲ್ಲಿ ಸಿಲುಕಿದ ವಿದ್ಯಾರ್ಥಿಗಳನ್ನು ವಾಪಸ್ ಕರೆಸಲು ಕೇಂದ್ರ, ರಾಜ್ಯ ಸರ್ಕಾರ ಹಾಗೂ ಜಿಲ್ಲಾ ಆಡಳಿತ ನಿರಂತರ ಮಾರ್ಗದರ್ಶನ ಮಾಡಿದೆ. ನಿರಂತರವಾಗಿ ವಿದ್ಯಾರ್ಥಿಗಳ ಸಂಪರ್ಕದಲ್ಲಿದ್ದೆವು. ದುರದೃಷ್ಟಕರವಾದ ಯುದ್ಧ ಸಂಭವಿಸಿದ ನಂತರ ಎಲ್ಲ ವಿದ್ಯಾರ್ಥಿಗಳನ್ನು ವಾಪಸ್ ಕರೆ ತರುವಲ್ಲಿ ಶ್ರಮಿಸಿದೆವು ಎಂದು ಹೇಳಿದರು.

ಯಾವುದೋ ಒಬ್ಬ ವ್ಯಕ್ತಿ ಏನೋ ಮಾತನಾಡಿದ್ದು, ಸಾಮಾಜಿಕ ಜಾಲತಾಣಗಳು ಹಾಗೂ ಮಾಧ್ಯಮಗಳಲ್ಲಿ ಹರಡಿತ್ತು. ಆದರೆ, ಇಲ್ಲಿರುವ ಯಾವ ವಿದ್ಯಾರ್ಥಿಗಳಲ್ಲೂ ಅಂತಹ ಭಾವ ಇಲ್ಲ. ವಿದ್ಯಾರ್ಥಿಗಳು ಹಾಗೂ ಪಾಲಕರಲ್ಲಿ ಕೃತಜ್ಞತಾ ಭಾವ ಇದೆ. ತಮಗೆ ನೆರವಾದ ಎಲ್ಲರನ್ನೂ ಸ್ಮರಿಸಿದ್ದಾರೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಪೋಷಕರು ಹಾಗೂ ವಿದ್ಯಾರ್ಥಿಗಳ ಪರವಾಗಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಕೆ.ಬಿ. ರುದ್ರೇಶ್, ವಿದ್ಯಾರ್ಥಿಗಳು ಮುಂದಿನ ಓದಿನ ಚಿಂತೆಯಲ್ಲಿದ್ದಾರೆ. ಅವರಿಗೆ ನೆರವಾಗಬೇಕೆಂದು ಕೋರಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಉಪಸ್ಥಿತರಿದ್ದರು.

# ಜೆಜೆಎಂ ವೈದ್ಯ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 14- ನಗರದ ಜೆಜೆಎಂ ವೈದ್ಯಕೀಯ ಕಾಲೇಜಿನ ಶೈಕ್ಷಣಿಕ ಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರಾಂಶುಪಾಲ ಡಾ.ಎಸ್.ಬಿ. ಮುರುಗೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಅಂತರರಾಷ್ಟ್ರೀಯ ಮಹಿಳಾ ದಿನದ 2022ರ ವಿಷಯವಾದ ಸೂಕ್ತ ನಾಳೆಗಾಗಿ ಇಂದು ಲಿಂಗ ಸಮಾನತೆ ಬಗ್ಗೆ ಮುರುಗೇಶ್ ಅವರು ಮಾತನಾಡಿ, ಮಹಿಳಾ ಸಿಬ್ಬಂದಿ ಹಾಗೂ ಸಮಸ್ತ ಸ್ತ್ರೀ ಶಕ್ತಿಗೆ ಧನ್ಯವಾದ ತಿಳಿಸಿ, ಶುಭ ಹಾರೈಸಿದರು.

ಜೆಜೆಎಂ ಮೆಡಿಕಲ್ ಕಾಲೇಜಿನ ನವಜಾತ ಶಿಶು ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಅಶ್ವಿನಿ ಮಾತನಾಡಿ, ಈ ಬಾರಿ ಮಹಿಳಾ ದಿನದ ವಿಷಯ ಹೆಚ್ಚು ಸಮರ್ಥನೀಯ ಭವಿಷ್ಯ ನಿರ್ಮಿಸುವ ಕೆಲಸ ಮಾಡುವ ಮಹಿಳೆಯರನ್ನು ಗುರುತಿಸುವ ಗುರಿಯನ್ನು ಹೊಂದಿದೆ ಎಂದರು.

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಯಾರೂ ನಿಮ್ಮನ್ನು ಕೆಳಕ್ಕೆ ಇಳಿಸಲು / ಅಥವಾ ನಿಮ್ಮನ್ನು ಎಂದಿಗೂ ಕೀಳಾಗಿ ಕಾಣಲು ಬಿಡಬೇಡಿ. ಕನಸು ಕಾಣುವುದನ್ನು ನಿಲ್ಲಿಸಿ, ನಿಮ್ಮ ಕನಸುಗಳನ್ನು ಬೆನ್ನಟ್ಟಿರಿ ಮತ್ತು ಈ ದಿನ ಮಾತ್ರವಲ್ಲ, ಪ್ರತಿದಿನವೂ ಬಲಶಾಲಿಯಾಗಿರಿ, ಸ್ವತಂತ್ರರಾಗಿರಿ, ಧೈರ್ಯದಿಂದಿರಿ ಎಂದು ಎಲ್ಲಾ ಮಹಿಳೆಯರಿಗೆ ತಿಳಿಸುತ್ತಾ ಡಾ. ಅಶ್ವಿನಿ ಅವರು ಮಹಿಳೆಯರಿಗೆ ಮಹಿಳಾ ದಿನಾಚರಣೆಯ ಶುಭಾಶಯ ತಿಳಿಸಿದರು.

ಜೆಜೆಎಂ ವೈದ್ಯಕೀಯ ಕಾಲೇಜಿನ ಶೈಕ್ಷಣಿಕ ಸಂಸ್ಥೆಯ ಡಾ.ಹನುಮಂತಪ್ಪ ಅವರು ಕಾರ್ಯಕ್ರಮದ ಜವಾಬ್ದಾರಿ ವಹಿಸಿದ್ದರು.

## ಜಿಲ್ಲೆಯಲ್ಲಿ ಇಂದು ನಿಷೇಧಾಜ್ಞೆ ಜಾರಿ

ದಾವಣಗೆರೆ, ಮಾ. 14- ಹಿಜಾಬ್ ವಿವಾದಕ್ಕೆ ಸಂಬಂಧಿಸಿದ ವಿಚಾರಣೆಯು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ನಡೆಯುತ್ತಿದ್ದು, ನಾಳೆ ಮಂಗಳವಾರ ತೀರ್ಪು ನೀಡುವ ಸಾಧ್ಯತೆ ಇರುತ್ತದೆ.

ಈ ಹಿನ್ನೆಯಲ್ಲಿ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ನಾಳೆ ದಿನಾಂಕ 15ರ ಬೆಳಿಗ್ಗೆ 6 ಗಂಟೆಯಿಂದ 19ರ ಬೆಳಿಗ್ಗೆ 6 ಗಂಟೆರೆ ವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

## ತರಗನಹಳ್ಳಿಯಲ್ಲಿ ಇಂದು ರಥೋತ್ಸವ

ಹೊನ್ನಾಳಿ ತಾಲ್ಲೂಕಿನ ತರಗನಹಳ್ಳಿಯಲ್ಲಿ ಇಂದು ಶ್ರೀ ಬಸವೇಶ್ವರ ದೇವರ ರಥೋತ್ಸವ ಮತ್ತು ಸ್ವಾಮಿಯ ಹೂವಿನ ಅಡ್ಡ ಪಲ್ಲಕ್ಕಿ ಮಹೋತ್ಸವ ನಡೆಯಲಿದೆ ಎಂದು ತರಗನಹಳ್ಳಿ ಟಿ.ಜಿ. ರಮೇಶ್‌ಗೌಡ ಕೋರಿದ್ದಾರೆ.

# ನಂದಿಗುಡಿ ಸಂಭ್ರಮದ ಮಹಾ ರಥೋತ್ಸವ



ಮಲೇಬೆನ್ನೂರು, ಮಾ.14- ನಂದಿಗುಡಿ ಗ್ರಾಮದ ಶ್ರೀ ಬಸವೇಶ್ವರ ದೇವರ ಮಹಾ ರಥೋತ್ಸವವು ಇಂದು ಮಧ್ಯಾಹ್ನ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಇದಕ್ಕೂ ಮುನ್ನ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ನಡೆಯಿತು.

ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ

### ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಕಲಾ ಮೆರಗು

ನೀಡಿದರು. ನಂತರ ಭಕ್ತರ ಜಯಘೋಷಗಳೊಂದಿಗೆ ರಥ ಎಳೆದು ಸಂಭ್ರಮಿಸಿದರು.

ವೀರಗಾಸೆ, ಡೊಳ್ಳು, ಕೀಲು ಕುಣಿತ ಸೇರಿದಂತೆ ವಿವಿಧ ಕಲಾ-ಮೇಳಗಳು ರಥೋತ್ಸವ ಹಾಗೂ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಮೆರಗು ತಂದವು.

ಅನೇಕ ಭಕ್ತರು ಬಾಳೆಹಣ್ಣುಗಳನ್ನು ರಥದ ಮೇಲೆ ಎಸೆದರೆ, ಕೆಲವು ಭಕ್ತರು ಮಂಡಕ್ಕಿ-ಮೆಣಸಿನಕಾಳು ಎಸೆದು ಭಕ್ತಿ ಸಮರ್ಪಿಸಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಉಕ್ಕಡಗಾತ್ರಿ ಅಜ್ಜಯ್ಯನ ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಸೇರಿದಂತೆ ನಂದಿಗುಡಿ, ಉಕ್ಕಡಗಾತ್ರಿ, ಗೋವಿನಹಾಳ್, ವಾಸನ, ಕೆ.ಎನ್. ಹಳ್ಳಿ, ಹಿಂಡಸಘಟ್ಟ, ಕೊಕ್ಕನೂರು, ಹಳ್ಳಿಹಾಳ್, ಜಿ.ಬೇವಿನಹಳ್ಳಿ, ಬಸವಾಪುರ, ಜಿಗಳಿ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ಬೆಳಿಗ್ಗೆ ಮಠದಲ್ಲಿ ರುದ್ರ ಗುಗ್ಗಳ ನೆರವೇರಿತು. ಸಂಜೆ ದೊಡ್ಡಬಂಡಿಗಳ ಪ್ರದರ್ಶನದ ನಂತರ ಕಂಕಣ ವಿಸರ್ಜನೆ ಮಾಡಲಾಯಿತು.

ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಬಸವೇಶ್ವರ ದೇವರ ಪಾಲಿಕೆ ಉತ್ಸವದೊಂದಿಗೆ ಬುಕ್ಕಿಟ್ಟಿನ ಸೇವೆ ನಡೆಯಲಿದೆ.

# ನಾಳೆ ಶ್ರೀ ರೇಣುಕಾಚಾರ್ಯರ ಜಯಂತಿ




ರಂಭಾಪುರಿ ಪೀಠ (ಬಾಳೆಹೊನ್ನೂರು), ಮಾ.15- ಬಾಳೆಹೊನ್ನೂರಿನ ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದಲ್ಲಿ ಮಾ. 14 ರಿಂದ 18 ರವರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ಶ್ರೀ ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಸಾನ್ನಿಧ್ಯದಲ್ಲಿ ಜರುಗಲಿವೆ.

ಕಾರ್ಯಕ್ರಮದ ಅಂಗವಾಗಿ ದಿ. 14 ರಂದು ಧ್ವಜಾರೋಹಣ-ಹರಿದ್ರಾ ಲೇಪನ ನಡೆದವು. ದಿ. 15 ರಂದು ಶ್ರೀ ಜಗದ್ಗುರು ಶಿವಾನಂದ ಎಸ್ಟೇಟ್‌ನಲ್ಲಿ ನೂತನವಾಗಿ ನಿರ್ಮಿಸಿದ ಶಕ್ತಿಮಾತೆ ಶ್ರೀ ಚೌಡೇಶ್ವರಿ ದೇವಾಲಯ ಉದ್ಘಾಟನೆ-ಪ್ರಾಣ ಪ್ರತಿಷ್ಠಾಪನೆ ಜರುಗುವುದು. ಸಂಜೆ 6.30 ಗಂಟೆಗೆ ಶ್ರೀ ವೀರಭದ್ರಸ್ವಾಮಿ ವಿಜಯೋತ್ಸವ ಸಮಾರಂಭ ನಡೆಯಲಿದೆ.

ದಿನಾಂಕ 16 ರ ಬೆಳಿಗ್ಗೆ 11 ಗಂಟೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವ ಜರುಗಲಿದ್ದು ಅತ್ಯುನ್ನತ ಶ್ರೀ ಜಗದ್ಗುರು ಪ್ರಶಸ್ತಿಯನ್ನು ತುಮಕೂರಿನ ಸಂಸದ ಜಿ.ಎಸ್. ಬಸವರಾಜು ಅವರಿಗೆ ಪ್ರದಾನ ಮಾಡಲಾಗುವುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮಾರಂಭದ ಉದ್ಘಾಟನೆ ನೆರವೇರಿಸುವರು.

ದಿನಾಂಕ 17 ರ ಬೆಳಿಗ್ಗೆ 11 ಗಂಟೆಗೆ ಚಿಕ್ಕಮಗಳೂರು ಜಿಲ್ಲಾ ಮಹಿಳಾ ಪ್ರಥಮ ಸಾಹಿತ್ಯ ಸಮ್ಮೇಳನವನ್ನು ಭಾರತ ಸರ್ಕಾರದ ರಾಜ್ಯ ಕೃಷಿ ಮತ್ತು ರೈತ ಕಲ್ಯಾಣ ಸಚಿವೆ ಕು. ಶೋಭಾ ಕರಂದ್ಲಾಜೆ ಉದ್ಘಾಟಿಸಲಿದ್ದಾರೆ.

## ಅಣಬೇರಿನಲ್ಲಿ ಮಾರಿಕಾಂಬ ಜಾತ್ರೆ



ದಾವಣಗೆರೆ ತಾಲ್ಲೂಕು ಅಣಬೇರು ಗ್ರಾಮದಲ್ಲಿ ಶ್ರೀ ಮಾರಿಕಾಂಬದೇವಿ ಜಾತ್ರೆಯು ಆರಂಭಗೊಂಡಿದ್ದು, ಇಂದು ಬೆಳಿಗ್ಗೆ 9 ರಿಂದ ಶ್ರೀ ಮಾರಿಕಾಂಬ ದೇವಿಗೆ ಉಡಿ ತುಂಬುವುದು. ರಾತ್ರಿ 10.30 ರಿಂದ ದೇವಿಯ ಮೆರವಣಿಗೆ ನಡೆಯುವುದು. ನಾಳೆ ಬುಧವಾರ ಬೆಳಗಿನ ಜಾವ 4.30 ರಿಂದ ಚರಗ ಹಾಕಲಾಗುವುದು. ಬೆಳಿಗ್ಗೆ 10.30 ರಿಂದ ದೇವಿಗೆ ಹರಕೆ ಪೂರೈಸು ವುದು, ಹೊಳೆ ಪೂಜೆ ಹೋಗಿಬಂದು, ದ್ವಾರ ಬಾಗಿಲ ಮುಳ್ಳು ಗದ್ದುಗೆ ತುಳಿಯುವುದು. ರಾತ್ರಿ 10.30ರ ನಂತರ ದೇವಿಯನ್ನು ಗುಡಿ ತುಂಬಿಸುವುದು.

## ಪಹಣಿ ದೋಷ ಸರಿಪಡಿಸದಿದ್ದರೆ ಎಸಿ ಕಚೇರಿ ಬಳಿ ಧರಣಿ

ದಾವಣಗೆರೆ, ಮಾ.14 - 15 ದಿನಗಳೊಳಗೆ ಪಹಣಿ ದೋಷ ಸರಿಪಡಿಸಿ ತಮಗೆ ಸೇರಬೇಕಾದ 2 ಎಕರೆ ಜಮೀನನ್ನು ಮರಳಿಸದಿದ್ದರೆ ಉಪ ವಿಭಾಗಾಧಿಕಾರಿ ಕಚೇರಿ ಮುಂಭಾಗ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ರೈತ ಸಂಘದ ಜಿಲ್ಲಾ ಖಜಾಂಚಿ ಕರಿಲಕ್ಕೇನಹಳ್ಳಿ ರೇವಣಸಿದ್ದಪ್ಪ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಆನಗೋಡು ಹೋಬಳಿ ಬುಳ್ಳಾಪುರದಲ್ಲಿ ದಾಖಲೆಗಳ ಪ್ರಕಾರ ಜಮೀನನ್ನು ಕ್ರಯಕ್ಕೆ ಪಡೆದಿದ್ದರೂ, ಕೇವಲ ಪಹಣಿಯಲ್ಲಿ ನಮೂದಾಗಿರುವ ಹೆಸರನ್ನೇ ಖಾತೆದಾರ ಎಂದು ಪರಿಗಣಿಸಿ ಕಾನೂನು ಬದ್ಧ ಹಕ್ಕಿಗೆ ದಕ್ಕೆಯುಂಟು ಮಾಡಲಾಗಿದೆ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಭೀಮಾನಾಯ್ಕ ಚಿನ್ನಸಮುದ್ರ, ನಾಗರಾಜ ಕರಿಲಕ್ಕೇನಹಳ್ಳಿ, ಹನುಮಂತಪ್ಪ, ಈಚಘಟ್ಟದ ಕರಿಬಸಪ್ಪ ಉಪಸ್ಥಿತರಿದ್ದರು.

## ಗ್ರಾಮಗಳ ಹೆಸರು ರದ್ಧತಿಗೆ ನಿರ್ಧಾರ

(3ನೇ ಪುಟದಿಂದ) ನಾಯಕ, ಸೋಲಿಗ, ಕಾಡುಕುರುಬ ಸೇರಿದಂತೆ ದುರ್ಬಲ ಸಮುದಾಯಗಳ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮಟ್ಟದಲ್ಲಿದೆ.

ರಾಜ್ಯದಲ್ಲಿ 3,499 ದಾಖಲೆ ರಹಿತ ಜನವಸತಿ ಪ್ರದೇಶಗಳ ಪೈಕಿ 632 ಗ್ರಾಮಗಳಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. 1441 ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಿ ಕಂದಾಯ ಗ್ರಾಮಗಳನ್ನಾಗಿ ಘೋಷಿಸಲಾಗಿದೆ. ಇನ್ನುಳಿದವುಗಳಿಗೆ ಕಾಲಾವಕಾಶ ಬೇಕಾಗುತ್ತದೆ ಎಂದರು.

## ಮೈಕ್ರೋಫೈನಾನ್ಸ್ ಬಡ್ಡಿಗೆ ಕಡಿವಾಣ

ಮುಂಬೈ, ಮಾ. 14 – ಮೈಕ್ರೋಫೈನಾನ್ಸ್ ಸಂಸ್ಥೆಗಳು ದುಬಾರಿ ಬಡ್ಡಿ ದರ ವಸೂಲಿ ಮಾಡಬಾರದು. ಸಾಲದ ಬಡ್ಡಿ ದರಕ್ಕೆ ಗರಿಷ್ಠ ಬಡ್ಡಿ ಹಾಗೂ ಶುಲ್ಕ ನಿಗದಿ ಪಡಿಸಬೇಕು ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ.

3 ಲಕ್ಷ ರೂ.ಗಳವರೆಗೆ ವಾರ್ಷಿಕ ಆದಾಯ ಹೊಂದಿರುವವರಿಗೆ ಜಾಮೀನು ರಹಿತವಾಗಿ ಸಾಲ ನೀಡುವುದನ್ನು ಮೈಕ್ರೋಫೈನಾನ್ಸ್ ಸಾಲ ಎಂದು ಪರಿಗಣಿಸಲಾಗುತ್ತದೆ. ಈ ಸಾಲಗಳ ಬಗ್ಗೆ ಮಾರ್ಗಸೂಚಿ ಪ್ರಕಟಿಸಿರುವ ರಿಸರ್ವ್ ಬ್ಯಾಂಕ್, ಸಾಲಗಳು ಮಾನದಂಡ ಹಾಗೂ ಉಸ್ತುವಾರಿಗೆ ಒಳಪಟ್ಟಿರಬೇಕು ಎಂದು ಹೇಳಿದೆ.

## ಜಿಗಳಿಯಲ್ಲಿ ಇಂದು ಕಳಸ ಧಾರಣೆ

ಶ್ರೀ ರಂಗನಾಥಸ್ವಾಮಿ ರಥೋತ್ಸವದ ಅಂಗವಾಗಿ ಇಂದು ರಾತ್ರಿ 8.30ಕ್ಕೆ ಮಹಾ ರಥಕ್ಕೆ ಕಳಸ ಧಾರಣೆ ಮಾಡಲಾಗುವುದು. ನಾಳೆ ಬುಧವಾರ ಬೆಳಿಗ್ಗೆ 8.30ಕ್ಕೆ ಗಜ ಉತ್ಸವ, ಸಂಜೆ ಶಸ್ತ್ರ ನಡೆಯಲಿದ್ದು, ಇದೇ ದಿನ ತಡರಾತ್ರಿ (ಗುರುವಾರ ಬೆಳಗಿನ ಜಾವ) ರಥೋತ್ಸವ ಜರುಗಲಿದೆ.

## ತಾರೇಹಳ್ಳಿಯಲ್ಲಿ 16ಕ್ಕೆ ರಥೋತ್ಸವ

ಜಗಳೂರು ತಾಲ್ಲೂಕಿನ ತಾರೇಹಳ್ಳಿಯಲ್ಲಿ ನಾಳೆ ಬುಧವಾರ ಶ್ರೀ ರಂಗನಾಥಸ್ವಾಮಿ ರಥೋತ್ಸವ ಜರುಗುವುದು.

ಇಂದು ಗರುಡ ವಾಹನ ಉತ್ಸವಗಳು, ಬುಧವಾರ ಸಂಜೆ 6.30 ಕ್ಕೆ ಶ್ರೀ ರಂಗನಾಥ ಸ್ವಾಮಿ ರಥೋತ್ಸವ. ದಿ. 17 ರ ಗುರುವಾರ ಜಾತ್ರೆ, ದಿ. 18 ರ ಶುಕ್ರವಾರ ಓಕಳಿ ಉತ್ಸವ ನಡೆಯುವುದು.




ಅಭಿನಂದನೆಗಳು
ಮನಮಿಡಿಯುವ ಸತ್ಯ ಕಥಾವಸ್ತುವುಳ್ಳ
'ದಿ ಕಾಶ್ಮೀರ ಫೈಲ್ಸ್'
ಚಲನಚಿತ್ರ ನಿರ್ಮಾಪಕ, ನಿರ್ದೇಶಕ, ಕಲಾವಿದರುಗಳಿಗೆ ಹಾಗೂ ಎಲ್ಲರೂ ನೋಡಲೇಬೇಕಾದ ಈ ಚಲನಚಿತ್ರಕ್ಕೆ ತೆರಿಗೆ ವಿನಾಯಿತಿ ನೀಡಿದ ಸರ್ಕಾರಕ್ಕೂ
ಹೃದಯಪೂರ್ವಕ ಅಭಿನಂದನೆಗಳು
ಅಜ್ಜಂಪುರ ಶೆಟ್ರು ಮೃತ್ಯುಂಜಯ
ಅಧ್ಯಕ್ಷರು, ಶ್ರೀ ವೀರಶೈವ ಕೆಡಿಟ್ ಕೋ-ಆಪ್ ಸೊಸೈಟಿ, ದಾವಣಗೆರೆ.


# ವಿದ್ಯಾರ್ಥಿಗಳು ಹೆಚ್ಚಿನ ಶ್ರಮವಹಿಸಿ ಕೌಶಲ್ಯ ಬೆಳೆಸಿಕೊಳ್ಳಿ

## ಭದ್ರಾ ಕಾಲೇಜಿನಲ್ಲಿನ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಡಾ. ಬಿ. ಬಕ್ಕಪ್ಪ ಹಿತ ನುಡಿ



ದಾವಣಗೆರೆ, ಮಾ. 14- ಇಂದಿನ ಕಲುಷಿತಗೊಂಡಿರುವ ವಾತಾವರಣದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಶ್ರಮವಹಿಸಿ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕೆಂದು ದಾವಣಗೆರೆ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ವಿಭಾಗದ ಮಾಜಿ ಕುಲ ಸಚಿವ ಡಾ. ಬಿ. ಬಕ್ಕಪ್ಪ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು

ನಗರದ ಕುವೆಂಪು ಕನ್ನಡ ಭವನದಲ್ಲಿ ನಿನ್ನೆ ನಡೆದ ಭದ್ರಾ ಪದವಿ ಪೂರ್ವ ಕಾಲೇಜಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ವಾರ್ಷಿಕ ಸಮಾರೋಪ ಸಮಾರಂಭ ಹಾಗೂ ಎಂ.ಕಾಂ. ಸ್ನಾತಕೋತ್ತರ ಪದವಿಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಮಹಾನ್ ಸಾಧಕರ ಜೀವನ ಚರಿತ್ರೆ ಮತ್ತು ಅವರು ಕ್ಲಿಷ್ಟ ಪರಿಸ್ಥಿತಿಗಳನ್ನು ಮೆಟ್ಟಿನಿಂತು ಅವರು ಮಾಡಿದ ಸಾಧನೆಗಳು ಇಂದಿನ ಯುವ ಜನಾಂಗಕ್ಕೆ ದಾರಿ ತೋರಿಸುತ್ತವೆ. ವಿದ್ಯಾರ್ಥಿಗಳಲ್ಲಿ ಕೋವಿಡ್-19ರ ನಂತರ ಯಾಂತ್ರಿಕತೆ ಆವರಿಸಿಕೊಂಡಿದ್ದು ಪ್ರಶ್ನಿಸುವ ಮತ್ತು ವಿಮರ್ಶಾತ್ಮಕವಾಗಿ ಆಲೋಚಿಸುವ ವಿವೇಚನೆಯನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ವಿಷಾದಿಸಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ ಮಾತನಾಡಿ, ಶೈಕ್ಷಣಿಕ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಕಲಿಕಾ ಕ್ರಮದಲ್ಲಿ ಗಣನೀಯ ಬದಲಾವಣೆಗಳನ್ನು ಈ ಶತಮಾನ ಕಂಡಿದೆ. ಆಫ್‌ಲೈನ್ ಹಾಗೂ ಆನ್‌ಲೈನ್ ತರಗತಿಗಳ ಸವಾಲುಗಳು ಮಕ್ಕಳು ಮತ್ತು ಪೋಷಕರಲ್ಲಿ ಹಲವಾರು ಆಂತಕಗಳನ್ನು ಸೃಷ್ಟಿಸಿದಂತಹ ಕೋವಿಡ್-19ರ ವಾತಾವರಣದಿಂದ ಮುಕ್ತರಾಗಿ ನವ ದಿಗಂತದತ್ತ ದಾಪುಗಾಲು ಇಡುತ್ತಿದ್ದೇವೆ. ಮೊಬೈಲ್ ಬಳಕೆಯ ಅನಿವಾರ್ಯತೆಯಿಂದ ಹೊರಬಂದು ಭೌತಿಕ ತರಗತಿಗಳ ಮೂಲಕ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿಯೊಂದಿಗೆ ಪಾಲ್ಗೊಳ್ಳಲು ಕರೆ ನೀಡಿದರು.

ಭದ್ರಾ ಪದವಿ ಕಾಲೇಜು, ಭದ್ರಾ ಪಿಜಿ ಸೆಂಟರ್ ಪ್ರಾಂಶುಪಾಲ ಪ್ರೊ. ಟಿ ಮುರುಗೇಶ್ ಮಾತನಾಡಿ, ಭದ್ರಾ ಸ್ನಾತಕೋತ್ತರ ಕೇಂದ್ರವನ್ನು ಇನ್ನೂ ಹೆಚ್ಚಿನ ಗುಣಮಟ್ಟದೊಂದಿಗೆ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದೆಂದು ತಿಳಿಸಿದರು.

ಭದ್ರಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಿ. ಚಂದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಭದ್ರಾ ಎಜುಕೇಷನ್ ಟ್ರಸ್ಟ್‌ನ ಮ್ಯಾನೇಜಿಗ್ ಟ್ರಸ್ಟಿ ಎಂ. ಸಂಕೇತ್ ಉಪಸ್ಥಿತರಿದ್ದರು.

2020-21ನೇ ಶೈಕ್ಷಣಿಕ ಸಾಲಿನಲ್ಲಿ ಎಂ.ಕಾಂ ಸ್ನಾತಕೋತ್ತರ ಪದವಿಯಲ್ಲಿ ಎಂ.ಎಸ್. ಲಕ್ಷಿ (ಎಂಟನೇ ರ್‍ಯಾಂಕ್) ಮತ್ತು ದೀಪಿಕಾ ಹೋಲೂರು (ಹತ್ತನೇ ರ್‍ಯಾಂಕ್) ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನ ಮಾಡಲಾಯಿತು.

ಶ್ರದ್ಧಾ ಸಂಗಡಿಗರು ಪ್ರಾರ್ಥಿಸಿದರು, ಉಪನ್ಯಾಸಕರಾದ ಸಿ.ಜಿ. ಅನಿತಾ ಸ್ವಾಗತಿಸಿದರು, ಉಪನ್ಯಾಸಕ ಎಸ್. ರವಿಕುಮಾರ್ ವಾರ್ಷಿಕ ವರದಿ ಮಂಡಿಸಿದರು. ಉಪನ್ಯಾಸಕರಾದ ಡಿ.ಆರ್. ಲಕ್ಷ್ಮಿಬಾಯಿ ನಿರೂಪಿಸಿದರು. ನಕ್ಕತ್ ಪರ್ವಿನ್ ವಂದಿಸಿದರು.


ಬಾಪೂಜಿ ವಿದ್ಯಾಸಂಸ್ಥೆ (ರಿ.)


ಬಾಪೂಜಿ ಆಸ್ಪತ್ರೆ ಮತ್ತು ಎಸ್.ಎಸ್. ಆಸ್ಪತ್ರೆಯಲ್ಲಿ ದಾವಣಗೆರೆ ದುರ್ಗಾಂಬಿಕಾ ಜಾತ್ರೆಯ ಪ್ರಯುಕ್ತ
50% ರಿಯಾಯಿತಿ ದರಗಳಲ್ಲಿ ಚಿಕಿತ್ಸೆ
ಬಾಪೂಜಿ ಸಮೂಹ ಸಂಸ್ಥೆಯ ಅಡಿಯಲ್ಲಿರುವ ಬಾಪೂಜಿ ಆಸ್ಪತ್ರೆ ಮತ್ತು ಎಸ್.ಎಸ್ ಆಸ್ಪತ್ರೆಯಲ್ಲಿ ದಾವಣಗೆರೆಯ 'ದುರ್ಗಾಂಬಿಕಾ ಜಾತ್ರೆಯ ಪ್ರಯುಕ್ತ" ದಾವಣಗೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಸಾರ್ವಜನಿಕರಿಗೆ 50% ರಿಯಾಯಿತಿ ದರಗಳಲ್ಲಿ ಒಳ ರೋಗಿಗಳಿಗೆ ಎಲ್ಲಾ ವಿಧದ ಚಿಕಿತ್ಸೆಯನ್ನು ನೀಡಲಾಗುವುದು ಮತ್ತು ರೋಗಿಯ ದಾಖಲಾತಿ ಹಾಗು ವಾರ್ಡಿನ ದರಗಳು ಸಂಪೂರ್ಣ ಉಚಿತವಾಗಿರುತ್ತದೆ.
ಈ ವಿನಾಯಿತಿಯು ದಿನಾಂಕ 15.03.2022 ರಿಂದ ದಿನಾಂಕ 28.03.2022ರ ವರೆಗೆ ಇರುತ್ತದೆ. ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕೆಂದು ತಿಳಿಯಪಡಿಸುತ್ತೇವೆ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte